ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 49 ಡಿಸೆಂಬರ್ 12, 1982 ಬೆಲೆ 60 ಪೈಸೆ

ಸಿ.ಪಿ.ಐ. (ಎಂ) ಉಮೇದ್ವಾರರು :

1) ಕಾಂ| ಪಿ. ರಾಮಚಂದ್ರರಾವ್ – ಉಳ್ಳಾಲ ಕ್ಷೇತ್ರ (ದ.ಕ.)
2) ಕಾಂ| ಎಸ್. ಸೂರ್ಯನಾರಾಯಣರಾವ್—ವರ್ತೂರು ಕ್ಷೇತ್ರ (ಬೆಂಗಳೂರು ಜಿಲ್ಲೆ)
3) ಕಾಂ| ಟಿ. ಎಸ್. ಮಣಿ—ಕೆ.ಜಿ ಎಫ್. ಕ್ಷೇತ್ರ (ಮೀಸಲು) ಕೋಲಾರ ಜಿಲ್ಲೆ
4) ಕಾಂ| ಎ. ವಿ. ಅಪ್ಪುಸ್ವಾಮಿ ರೆಡ್ಡಿ – ಬಾಗೇಪಲ್ಲಿ ,,

ಇವರೆಲ್ಲರ ಯಶಸ್ವಿಗಾಗಿ ದುಡಿಯಬೇಕೆಂದು
ನಮ್ಮ ಕಳಕಳಿಯ ಮನವಿ

ಚುನಾವಣೆಯಲ್ಲಿ ಐಕ್ಯ ಹೋರಾಟದ ನಿರ್ಧಾರ

ಜನವರಿ 5 ರಂದು ನಡೆಯಲಿರುವ ಕರ್ನಾಟಕ ರಾಜ್ಯದ ವಿಧಾನಸಭೆಯ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿಯನ್ನು ಬಿಟ್ಟು ಇತರ ಅಖಿಲ ಭಾರತ ಮಟ್ಟದ ರಾಜಕೀಯ ಪಾರ್ಟಿಗಳು—ಜನತಾ, ಕ್ರಾಂತಿರಂಗ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಭಾರತ ಕಮ್ಯುನಿಸ್ಟ್ ಪಾರ್ಟಿ—ಹೀಗೆ ನಾಲ್ಕು ಪಾರ್ಟಿಗಳು ಚುನಾವಣೆಯಲ್ಲಿ ಸ್ಥಾನಗಳ ಹೊಂದಾಣಿಕೆ ಮಾಡಿಕೊಂಡು ಸಂಯುಕ್ತವಾಗಿ ಇಂದಿರಾ ಕಾಂಗ್ರೆಸ್ ಪಕ್ಷವನ್ನು ಎದುರಿಸಬೇಕೆಂಬ ನಿರ್ಧಾರಕ್ಕೆ ಬಂದಿರುವುದು ಕರ್ನಾಟಕದ ಚುನಾವಣೆಯ ರಾಜಕೀಯ ರಂಗದಲ್ಲಿ ಒಂದು ಮಹತ್ವದ ಸ್ವಾಗತಾರ್ಹ ಘಟನೆಯಾಗಿದೆ. ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಜಾತೀವಾದ, ದಬ್ಬಾಳಿಕೆಯಿಂದಲೇ ಅಧಿಕಾರ ನಡೆಸುತ್ತಿರುವ ಗುಂಡೂರಾವ್ ಸರಕಾರದ ಆಡಳಿತೆಯ ನೀತಿಗೆ ಬೇಸತ್ತಿರುವ ಮತದಾರರು ವಿರೋಧ ಪಕ್ಷಗಳ ಈ ನಿರ್ಣಯವನ್ನು ಅತ್ಯಾನಂದದಿಂದ ಸ್ವಾಗತಿಸುವರೆಂದು ನಂಬಿದರೆ ಅತಿಶಯೋಕ್ತಿ ಏನಲ್ಲ. ಅಲ್ಪ ಬಹುಮತದಿಂದಲೇ ಆರಿಸಿ ಬರುತ್ತಿರುವ ಕಾಂಗೈಯನ್ನು ಸೋಲಿಸಲು ವಿರೋಧ ಪಕ್ಷಗಳೆಲ್ಲ ಒಂದಾಗಿ ಒಬ್ಬ ಉಮೇದುವಾರನನ್ನೇ ನಿಲ್ಲಿಸಬೇಕೆಂಬ ಅಪೇಕ್ಷೆಯನ್ನು ಜನತೆ ವ್ಯಕ್ತ ಮಾಡುತ್ತಿದ್ದರು. ಮತದಾರರ ಅಪೇಕ್ಷೆಯಂತೆ ನಾಲ್ಕೂ ಪಕ್ಷಗಳ ಮುಖಂಡರು ತಮ್ಮ ಪಕ್ಷಗಳ ಕೆಲವು ಸ್ಥಾನಗಳನ್ನು ಬಿಟ್ಟುಕೊಡಲು ಮುಂದಾಗಿರುವುದು ಇಂದಿರಾ ಕಾಂಗ್ರೆಸ್ಸಿನಂತ ಸರ್ವಾಧಿಕಾರಿ ಶಕ್ತಿಯನ್ನು ಸೋಲಿಸಲಿಕ್ಕೆ ಕೈಗೊಂಡ ಪ್ರಥಮ ಹೆಜ್ಜೆಯಾಗಿದೆ. ಇದು ಈ ವಿರೋಧ ಪಕ್ಷಗಳ ದೃಢ ನಿರ್ಧಾರವನ್ನು ತೋರಿಸುತ್ತದೆ.

ಇದೇ ಸಮಯದಲ್ಲಿ ತಾವು ಬಲಿಷ್ಟರಾಗುವತನಕ ಇಂದಿರಾ ಗಾಂಧಿಯೇ ಅಧಿಕಾರದಲ್ಲುಳಿಯಬೇಕೆಂಬ ದೂರ್ತ ರಾಜಕೀಯ ಧೋರಣೆಯನ್ನು ಹೊಂದಿರುವ ಭಾರತೀಯ ಜನತಾ ಪಾರ್ಟಿ ಪ್ರಾರಂಭದಿಂದಲೂ ಇತರ ವಿರೋಧ ಪಕ್ಷಗಳನ್ನು ಬಹಿರಂಗವಾಗಿಯೇ ಅವಹೇಳನ ಮಾಡುವಂತ ನೀತಿಯನ್ನು ಅನುಸರಿಸುತ್ತ ಬಂದಿದ್ದರೂ, ಕೆಲವು ದಿವಸಗಳ ಹಿಂದೆ ಜನತಾ ಪಾರ್ಟಿ-ಕ್ರಾಂತಿರಂಗದ ಜೊತೆಯಲ್ಲಿ ಚುನಾವಣಾ ಹೊಂದಾಣಿಕೆಯ ಮಾತುಕತೆ ನಡೆಸಿದಂತೆ ಮಾಡಿ, "ಕಾಂಗೈಯನ್ನು ಬಿಟ್ಟು ಬರುವವರಿಗೆ ಸ್ಥಾನಕೊಡಬೇಕಾದೀತೆಂದು" ಜನತಾ ಪಕ್ಷದ ಮುಖಂಡರು ಹೇಳಿರುವರೆಂಬ ಕುಂಟುನೆವ ಮುಂದೆಮಾಡಿ ಸ್ಥಾನಗಳ ಹೊಂದಾಣಿಕೆಯ ಕುರಿತು ಚರ್ಚೆಯನ್ನು ಮುರಿದು ಹಾಕಿರುವುದು ಸರ್ವಾಧಿಕಾರಿ ವಿರೋಧಿಯಾಗಿರುವ ಮತದಾರರಲ್ಲಿ ಕೆಲವು ಮಟ್ಟಿಗೆ ನಿರಾಶೆಯನ್ನುಂಟು ಮಾಡಬಹುದು. ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲು ಬಿ.ಜೆ.ಪಿ.ಗೆ ಕೆಲವು ಸ್ಥಾನಗಳನ್ನು ಬಿಟ್ಟುಕೊಡುವುದಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ವಿರೋಧಿಸಿರಲಿಲ್ಲ. ಜನತಾ-ಕ್ರಾಂತಿರಂಗ, ಸಿ. ಪಿ. ಐ. ಕ್ಷೇತ್ರಗಳಲ್ಲಷ್ಟೆ ಒಟ್ಟಾಗಿ ಪ್ರಚಾರ ಮಾಡಲಾಗುವುದೆಂದೂ ಬಿ ಜೆ ಪಿ. ಕ್ಷೇತ್ರದಲ್ಲಿ ಮಾತ್ರ ಆ ರೀತಿಯ ಪ್ರಚಾರ ಮಾಡುವುದಿಲ್ಲೆಂದೂ ಸಿ. ಪಿ. ಐ. (ಎಂ) ತನ್ನ ನಿಲುವೆಯನ್ನು ಸ್ಪಷ್ಟಮಾಡಿತ್ತು. ಸಿ.ಪಿ.ಐ. ಮಾತ್ರ ಅಂಥ ಹೊಂದಾಣಿಕೆಗೂ ತಯಾರಿಲ್ಲೆಂದು ಹೇಳಿತ್ತು. ಇತ್ತೀಚಿಗೆ ನಡೆದ ಕೇರಳ, ಹರಿಯಾಣ, ಹಿಮಾಚಲ ಪ್ರದೇಶಗಳಲ್ಲಿ ನಡೆದ ಚುನಾವಣೆಗಳಲ್ಲಿ ಕೂಡ ಬಿ. ಜೆ. ಪಿ. ಆಳುವ ಕಾಂಗೈ ಪಕ್ಷ ಆರಿಸಿ ಬರುವ ರೀತಿಯಲ್ಲಿ ವರ್ತಿಸಿರುವ ಸಂಗತಿ ಎಲ್ಲರಿಗೂ ಗೊತ್ತು. ಕರ್ನಾಟಕದಲ್ಲಿ ಕೂಡ ಅದೇ ನೀತಿಯನ್ನೇ ಬಿ. ಜೆ. ಪಿ. ಅನುಸರಿಸುತ್ತಿರುವಂತೆ ಕಂಡು ಬರುತ್ತದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಅಷ್ಟೇ ಅಲ್ಲ ಜನತಾ ಪಾರ್ಟಿಯ ಅಧ್ಯಕ್ಷರಾದ ಚಂದ್ರಶೇಖರ ಅವರು ಕೂಡ ಬೆಂಗಳೂರಿನ ಪತ್ರಿಕಾ ಹೇಳಿಕೆಯಲ್ಲಿ ಬಿ ಜೆ. ಪಿ. ತಾನು ಬಲಿಷ್ಟಗೊಳ್ಳುವತನಕ ಇಂದಿರಾ ಕಾಂಗೈಗೆ ಸಹಾಯ ಮಾಡುವ ನೀತಿಯನ್ನನುಸರಿಸುತ್ತಿದೆಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಕರ್ನಾಟಕದ ಮತದಾರರು ಭಾರತೀಯ ಜನತಾ ಪಾರ್ಟಿಯ ಈ ರಾಜಕೀಯ ನಿಲುವೆಯನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ.

ಬಿ. ಜೆ. ಪಿ. ಯ ಅಸಮರ್ಪಕ ನಿಲುವು

ಕಾಂಗೈ ಪೀಕಲಾಟ :

ಬಿ.ಜೆ.ಪಿ. ಬಿಟ್ಟು ಪ್ರಮುಖ ರಾಜಕೀಯ ಪಕ್ಷಗಳು ಒಂದು ಹೊಂದಾಣಿಕೆಗೆ ಬಂದಿರುವ ಈ ಸಮಯದಲ್ಲಿ ಕಾಂಗೈನಲ್ಲಿ ಟಿಕೇಟಿಗಾಗಿ ಗುಂಪು, ಪೈಪೋಟಿ ನಡೆದು ಪೀಕಲಾಟಕ್ಕಿಟ್ಟುಕೊಂಡಿತ್ತು. ಅಂತೂ ಇಂದು (10-12-82) ಗುಂಡೂರಾವ್ ಒಂದು ಪಟ್ಟಿಯನ್ನು ಸಿದ್ಧಮಾಡಿ ಪತ್ರಿಕೆಗೆ ಬಿಡುಗಡೆ ಮಾಡಿದ್ದಾರೆ. ಕಾಂಗೈನ ಹಾಲಿ ಶಾಸಕರಲ್ಲಿ ನೂರು ಮಂದಿಗೆ ಮಾತ್ರ ಟಿಕೇಟ್ ನೀಡಲಾಗಿದೆ. ಅಪಾದನೆಗಳನ್ನು ಎದುರಿಸಿ ಮಂತ್ರಿಮಂಡಲಕ್ಕೆ ರಾಜೀನಾಮೆ ನೀಡಿದ್ದ ಸಿ. ಎಂ. ಇಬ್ರಾಹಿಂ ಮತ್ತು ರೇಣುಕಾ ರಾಜೇಂದ್ರನ್ ಅವರ ಹೆಸರುಗಳೂ ಪಟ್ಟಿಯಲ್ಲಿವೆ. ಕಾಂಗೈ ಅಭ್ಯರ್ಥಿಗಳಿಗೆ ಮಾನದಂಡ ಯಾವುದು ಎಂಬುದು ಇದರಿಂದ ಸ್ಪಷ್ಟವಾದಂತಾಗಿದೆ. "ಆಯಾ ಜಾತಿಗಳಿಗೆ ಜಾತಿವಾರು ಪ್ರಾತಿನಿಧ್ಯ ನೀಡಲಾಗಿದೆ" ಎಂದು ಗುಂಡೂರಾವ್ ತಿಳಿಸಿದ್ದಾರೆ. ಜಾತೀಯತೆಯ ಪಿಡುಗನ್ನು ತೊಡೆಯಬೇಕೆಂದು ಬೊಬ್ಬೆ ಹಾಕುತ್ತಿರುವುದೂ ಅವರ ಮಹಾ ನಾಯಕಿಯೇ. ಕಾಂಗೈ ಟಿಕೇಟ್ ಬಯಸಿ 8000ಕ್ಕೂ ಮಿಕ್ಕಿ ಅರ್ಜಿಗಳು ಬಂದಿದ್ದು, ಒಂದು ಅರ್ಜಿಗೆ ರೂ. 500ರಂತೆ (ಹಿಂದುಳಿದವರಿಗೆ ರೂ. 250) ಲಕ್ಷಾವಧಿ ರೂ.ಗಳನ್ನು ಶೇಖರಿಸಲಾಗಿದೆ. ಒಮ್ಮೆ ಶಾಸಕನಾಗಿ ಆಯ್ಕೆಯಾದೊಡನೆ ಮೇಯಲು ಸಾಕಷ್ಟು ದೊಡ್ಡ ಹುಲ್ಲುಗಾವಲಿದೆ ಎಂದು ಕಾಂಗೈನವರ ಲೆಕ್ಕಾಚಾರ.

ಒಟ್ಟಿನ ಮೇಲೆ ಟಿಕೆಟು ಹಂಚಿಕೆ ನೆನೆಗುದಿಗೆ ಬಿದ್ದಿದ್ದು, ಇದೀಗ ಒಂದು ತೀರ್ಮಾನಕ್ಕೆ ಬರಲಾಗಿದೆ. ಟಿಕೇಟು ಸಿಗದ ಅತೃಪ್ತರು ಎಷ್ಟು ಜನ ಕಣಕ್ಕೆ ಇಳಿಯಲಿದ್ದಾರೆಂಬುದನ್ನು ಕಾದು ನೋಡಬೇಕಷ್ಟೆ.

ಇಂದಿನ (10-12-82) ಪತ್ರಿಕಾ ವರದಿಗಳ ರೀತ್ಯ ಚುನಾವಣಾ ರಂಗದ ಒಂದು ಚಿತ್ರಣ ಇಂತಿದೆ :

ಕಾಂಗೈ ಒಟ್ಟು 224 ಸ್ಥಾನಗಳಲ್ಲಿ 221 ಸ್ಥಾನಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ. ಬಿ.ಜೆ ಪಿ. 110 ಸ್ಥಾನಗಳ ಪಟ್ಟಿ ಪ್ರಕಟಿಸಿದೆ. ಏಕ ಸಂಕೇತ, ಏಕ ಪ್ರಣಾಳಿಕೆ, ಏಕ ಕಾರ್ಯಕ್ರಮ ಹಾಗೂ ಏಕ ವೇದಿಕೆಯ ಘೋಷಣೆಯ ಮೂಲಕ ಜನತಾ ಪಕ್ಷ ಮತ್ತು ಕರ್ನಾಟಕ ಕ್ರಾಂತಿರಂಗ ಸಂಯುಕ್ತ ಜನತಂತ್ರವಾದಿ ರಂಗವಾಗಿ ಒಟ್ಟಿಗೆ ಬಂದಿವೆ. ಈ ಎರಡು ಪಕ್ಷಗಳ ಜೊತೆಗೆ ಚುನಾವಣಾ ಸ್ಥಾನ ಹೊಂದಾಣಿಕೆಯಲ್ಲಿ ಸಿ.ಪಿ ಐ. ಮತ್ತು ಸಿ.ಪಿ.ಐ. (ಎಂ) ಪಕ್ಷಗಳು ಸಹಭಾಗಿಗಳಾಗಿವೆ. ಆದರೆ ಈ ಎರಡೂ ಪಕ್ಷಗಳು ರಂಗದ ಪಾಲುದಾರರಲ್ಲ.

ಈ ನಾಲ್ಕು ಪಕ್ಷಗಳ ಸ್ಥಾನ ಹೊಂದಾಣಿಕೆ ಈ ರೀತಿ ಇದೆ :

ಜನತಾ-112, ಕ್ರಾಂತಿರಂಗ-90, ಸಿ.ಪಿ.ಐ.—7 ಮತ್ತು ಸಿ. ಪಿ. ಐ. (ಎಂ)—4 ಕೊನೆಯ ಗಳಿಗೆಯಲ್ಲಿ ಡಿ. ಎಸ್. ಪಿ, ಲೋಕದಳ (ಕರ್ಪೂರಿ ಬಣ), ಕಾಂಗ್ರೆಸ್ (ಎಸ್) ರಂಗಕ್ಕೆ ಬಂದರೆ ಅವುಗಳೊಂದಿಗೂ ಸೀಟು ಹೊಂದಾಣಿಕೆ ಮಾಡಿಕೊಳ್ಳುವ ನಿರೀಕ್ಷೆ ಇದೆ.

ನಾಲ್ಕೂ ಪಕ್ಷಗಳ ನಾಯಕರುಗಳ ಜಂಟಿ ಪತ್ರಿಕಾಗೋಷ್ಠಿ ಡಿಸೆಂಬರ್ 9 ರಂದು ಬೆಂಗಳೂರಿನಲ್ಲಿ ನಡೆದಿದ್ದು, ರೈತ, ಕಾರ್ಮಿಕ, ವಿದ್ಯಾರ್ಥಿಗಳ ಮೇಲೆ ಪೋಲೀಸರ ದೌರ್ಜನ್ಯಕ್ಕೆ ಕಾರಣವಾಗಿ ಅವರ ಹಿತಾಸಕ್ತಿಗೆ ಧಕ್ಕೆ ತಂದ ಸರಕಾರ ತೊಲಗಬೇಕು ಎಂಬುದು ನಮ್ಮ ಗುರಿ ಎಂದು ಕಾಂ| ಸೂರ್ಯನಾರಾಯಣ ರಾವ್ ತಿಳಿಸಿದ್ದಾರೆ.

ಬಹುಃಶ ಹದಿನೈದನೇ ತಾರೀಖಿನಂದು ರಾಜ್ಯ ಚುನಾವಣಾ ರಂಗದ ಸ್ಪಷ್ಟ ಚಿತ್ರ ನಾವು ಕಾಣಬಹುದು. ಭ್ರಷ್ಟ, ಜನವಿರೋಧಿ ಸರಕಾರದ ವಿರುದ್ಧ ಮತ ನೀಡಲು ಅವಕಾಶ ಮಾಡಿಕೊಡುವ ಸಂದರ್ಭವನ್ನು ವಿರೋಧ ಪಕ್ಷ(ಬಿ.ಜೆ.ಪಿ ಬಿಟ್ಟು)ಗಳು

(8ನೇ ಪುಟ ನೋಡಿ)

ಸಿ. ಪಿ. ಐ. (ಎಂ), ಸಿ. ಪಿ. ಐ., ಜನತಾ ಮತ್ತು ಕ್ರಾಂತಿರಂಗ ಅಭ್ಯರ್ಥಿಗಳಿಗೆ ಮತ ನೀಡಿ

ಸರ್ವಾಧಿಕಾರಿ ಶಕ್ತಿಗಳನ್ನು ಹಿಮ್ಮೆಟ್ಟಿಸಿ—ಪ್ರಜಾಪ್ರಭುತ್ವ ಉಳಿಸಿ

ಡೆಕ್ಕನ್ ಹೆರಾಲ್ಡ್‌ನ ದೆಹಲಿ ಬ್ಯೂರೋದ ಕಟ್ಟುಕಥೆ

[ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ದೆಹಲಿ ಬ್ಯೂರೋ ತನ್ನ 30-11-82ರ ಸಂಚಿಕೆಯಲ್ಲಿ 'ಸಿ. ಪಿ. ಎಂ. ರಷ್ಯದತ್ತ ವಾಲುತ್ತಿದೆಯೇ' ಎಂಬ ತಲೆ ಬರಹದಡಿಯಲ್ಲಿ ವರದಿಯೊಂದನ್ನು ಪ್ರಕಟಿಸಿದೆ. ಕಾಂ| ಪ್ರಮೋದ್ ದಾಸ್ ಗುಪ್ತರವರ ಸಾವಿನ ಹಿನ್ನೆಲೆಯಲ್ಲಿ ಸಿ. ಪಿ. ಐ. (ಎಂ) ನ ಧೋರಣೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಅದರ ಅಂತರರಾಷ್ಟ್ರೀಯ ನೀತಿಯಲ್ಲಿ ಉಂಟಾಗಬಹುದಾದ ಪರಿಣಾಮಗಳನ್ನು ಕುರಿತು ತನ್ನದೇ ಆದ ಕಲ್ಪನೆಗಳ ಆಧಾರದ ಮೇಲೆ ಈ ವರದಿಯನ್ನು ಪ್ರಕಟಿಸಿದೆ. ಈ ವರದಿಯಲ್ಲಿ ವರದಿಗಾರನು ಮಂಡಿಸಿರುವ ವಿಶ್ಲೇಷಣೆಯಲ್ಲಿ ಆತನ ಅಜ್ಞಾನ ಸ್ಪುಟವಾಗಿ ಪ್ರತಿಬಿಂಬಿತಗೊಂಡಿದೆ.

ಈ ವರದಿಯನ್ನು ಕುರಿತು ಸಿ. ಪಿ. ಐ. (ಎಂ)ನ ರಾಜ್ಯ ಕಾರ್ಯಕಾರೀ ಸಮಿತಿ ಸದಸ್ಯ ಕಾಂ| ವಿ. ಜೆ. ಕೆ. ನಾಯರ್‌ರವರು ಡೆಕ್ಕನ್ ಹೆರಾಲ್ಡ್ ಪತ್ರಿಕೆಗೆ ಬರೆದ ಪತ್ರದ ಸಂಕ್ಷಿಪ್ತರೂಪವನ್ನು ಇಲ್ಲಿ ಕೊಡುತ್ತಿದ್ದೇವೆ]

1961ರಲ್ಲಿ ವಿಜಯವಾಡಾದಲ್ಲಿ ನಡೆದ ಅವಿಭಾಜಿತ ಕಮ್ಯುನಿಸ್ಟ್ ಪಕ್ಷದ ಆರನೇ ಸಮ್ಮೇಳನದಲ್ಲಿ ಕಾಂ| ಪ್ರಮೋದ್ ದಾಸ್ ಗುಪ್ತರವರು ಪರಿಷ್ಕರಣವಾದದ ವಿರುದ್ಧ ನಡೆಸಿದ ಹೋರಾಟವನ್ನು ಕುರಿತಂತೆ ಸಿ.ಪಿ.ಐ. (ಎಂ)ನ ಪೊಲಿಟ್‌ಬ್ಯೂರೋ ಮಾಡಿದ ಉಲ್ಲೇಖವನ್ನು ವರದಿಗಾರರು ತಪ್ಪಾಗಿ ಅರ್ಥೈಸಿಕೊಂಡು ತಮ್ಮ ಅಜ್ಞಾನವನ್ನು ತೋರಿಸಿಕೊಂಡಿದ್ದಾರೆ.

ಪೊಲಿಟ್‌ಬ್ಯೂರೋದ ಹೇಳಿಕೆಯನ್ನು ಉಲ್ಲೇಖಿಸಿ ಈ ವರದಿಗಾರರು ತಮ್ಮ ವರದಿಯಲ್ಲಿ "ಪರಿಷ್ಕರಣವಾದಕ್ಕೆ ವಿರುದ್ಧವಾಗಿ ನಡೆಯುತ್ತಿದ್ದ ಹೋರಾಟ ವಿಜಯವಾಡಾ ಸಮ್ಮೇಳನದ ಸಂಧರ್ಬದಲ್ಲಿ ಅತ್ಯುಚ್ಛ ಘಟ್ಟವನ್ನು ತಲುಪಿತ್ತು" ಎಂಬುದನ್ನು ಪೊಲಿಟ ಬ್ಯೂರೋ ಒಪ್ಪಿಕೊಂಡಿದೆ. ಇದು ತೀರಾ ಅಶ್ಚರ್ಯಕರ ಎಂಬುದಾಗಿ ಬರೆದಿದ್ದಾರೆ.

ಪೊಲಿಟ್‌ಬ್ಯೂರೋ ಮಾಡಿರುವ ಉಲ್ಲೇಖವು 1961ರಲ್ಲಿ ವಿಜಯವಾಡಾದಲ್ಲಿ ನಡೆದ ಅವಿಭಾಜಿತ ಕಮ್ಯುನಿಸ್ಟ್ ಪಕ್ಷದ 6ನೇ ಸಮ್ಮೇಳನದ ಕುರಿತಾಗಿ ದೆಯೇ ಹೊರತು 1982ರಲ್ಲಿ ವಿಜಯವಾಡಾದಲ್ಲಿ ನಡೆದ ಸಿ.ಪಿ.ಐ (ಎಂ) ನ ಹನ್ನೊಂದನೇ ಸಮ್ಮೇಳನವನ್ನು ಕುರಿತದ್ದಲ್ಲ ಎಂಬುದನ್ನು ವರದಿಗಾರರು ತಿಳಿಯಬೇಕಿತ್ತು. ಅಲ್ಲದೆ ಇಡೀ ವರದಿಯು ಈ ತಪ್ಪು ಗ್ರಹಿಕೆಯ ಸುತ್ತ ಹೆಣೆಯಲಾಗಿರುವ ಸುಳ್ಳಿನ ಕಂತೆಯಾಗಿದೆ. ವರದಿಗಾರರ ಈ ಅಜ್ಞಾನಕ್ಕೆ ನಮ್ಮ ಮರುಕವಿದೆ.

1982ರ ಜನವರಿಯಲ್ಲಿ ವಿಜಯವಾಡಾದಲ್ಲಿ ನಡೆದ ಸಿ.ಪಿ.ಐ. (ಎಂ) ನ ಹನ್ನೊಂದನೇ ಸಮ್ಮೇಳನದಲ್ಲಿ ರಾಜಕೀಯ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಈ ರಾಜಕೀಯ ನಿರ್ಣಯದಲ್ಲಿ ಅಂತರರಾಷ್ಟ್ರೀಯ ವಿಚಾರಗಳನ್ನು ಉಲ್ಲೇಖಿಸಲಾಗಿದೆ. ಪೊಲಿಟ್ ಬ್ಯೂರೋದಲ್ಲಾಗಲೀ ಅಥವಾ ಕೇಂದ್ರ ಸಮಿತಿಯಲ್ಲಾಗಲೀ ಪಕ್ಷದ ಅಂತರರಾಷ್ಟ್ರೀಯ ನೀತಿ ಕುರಿತಂತೆ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳೂ ತಲೆದೋರಲಿಲ್ಲ. ಹಾಗಿರುವಾಗ ಪತ್ರಿಕೆಯ ವರದಿಗಾರರು ಬರೆದಿರುವಂತೆ ರಷ್ಯದೊಂದಿಗಿನ ಪಕ್ಷದ ಮೈತ್ರಿಗೆ ಪ್ರಮೋದ್ ದಾಸ್ ಗುಪ್ತ ಅವರು ಪ್ರಮುಖ ಅಡ್ಡಿಯಾಗಿದ್ದರೆಂಬುದು ಸತ್ಯಕ್ಕೆ ಅಪಚಾರ ಮಾಡಿದಂತಲ್ಲವೇ ?

1982ರ ವಿಜಯವಾಡಾ ಸಮ್ಮೇಳನದಲ್ಲಿ ಪಶ್ಚಿಮ ಬಂಗಾಳದ ಪ್ರತಿನಿಧಿಗಳು ಚರಣ್‌ಸಿಂಗ್ ಮಂತ್ರಿ ಮಂಡಳದ ರಚನೆಯ ಕುರಿತಾಗಿ ವ್ಯಕ್ತಪಡಿಸಿದ ಭಿನ್ನಾಭಿಪ್ರಾಯಗಳನ್ನು ಸಮ್ಮೇಳನದ ದಾಸ್ತಾವೇಜುಗಳಲ್ಲಿ ಸೇರಿಸಲಾಗಿದೆ. ಹಾಗೂ ಬಹಿರಂಗ ದಸ್ತಾವೇಜು ಮತ್ತು ವಿಜಯವಾಡಾ ಸಮ್ಮೇಳನದ ಮುಖ್ಯ ಭಾಷಣಗಳು ಎಂಬ ಹೊತ್ತಿಗೆಯಲ್ಲಿ ನಮೂದಿಸಲಾಗಿದೆ. ಈ ದಸ್ತಾವೇಜುಗಳನ್ನು ಪ್ರಕಟಿಸಿದ ನಂತರವೂ ಇಂತಹ ಕಲ್ಪನೆಗಳು ಹುಟ್ಟಿಕೊಳ್ಳುತ್ತಿದ್ದರೆ ಅದು ಖಂಡಿತವಾಗಿಯೂ ದುರುದ್ದೇಶಪೂರಿತವಾದುದೆಂದೂ ಮತ್ತು ಕಾರ್ಮಿಕರ ಚಳುವಳಿಯ ವಿರುದ್ಧದ ನಿಲುವೆಂದೂ ಹೇಳದೆ ಬೇರೆ ದಾರಿಯಿಲ್ಲ.

ಇಡೀ ವರದಿಯು ಪರಿಷ್ಕರಣ ವಿರೋಧೀ ನೀತಿಯನ್ನು ಸೋವಿಯೆತ್ ವಿರೋಧ ಮತ್ತು ಚೀನಾ ಪರ ಎಂಬ ನೆಲೆಯಲ್ಲಿ ಸಮೀಕರಿಸಿದೆ. ಸಿ. ಪಿ. ಐ. (ಎಂ) ಪರಿಷ್ಕರಣವಾದ ಮತ್ತು ಸಂಕುಚಿತವಾದದ ವಿರುದ್ಧ ಸತತವಾಗಿ ಹೋರಾಟ ನಡೆಸಿ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಐಕ್ಯತೆಗಾಗಿ ಶ್ರಮಿಸುತ್ತಿದೆ. ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷವು ತನ್ನ ಸೌಹಾರ್ದ ಬೆಂಬಲ ಮತ್ತು ವಿಮರ್ಶೆಗಳನ್ನು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಕುರಿತಾಗಲೀ, ಚೀನೀ ಕಮ್ಯುನಿಸ್ಟ್ ಪಕ್ಷದ ಕುರಿತಾಗಲೀ ಪ್ರತ್ಯೇಕವಾದ ದೃಷ್ಟಿಯಿಂದಲೇ ನೋಡುತ್ತದೆಯೇ ಹೊರತು ಕುರುಡು ನಿಷ್ಠೆಯನ್ನು ತೋರಿಸುತ್ತಿಲ್ಲ. ಅಲ್ಲದೆ ಸಮಾಜವಾದೀ ಶಿಬಿರಕ್ಕೆ ಬೆಂಬಲ ಕೊಡುವುದರೊಂದಿಗೆ ರಾಷ್ಟ್ರದ ಒಳಗಿನ ವರ್ಗ ಹೋರಾಟವನ್ನು ಬೆಳೆಸಲು ಪ್ರಯತ್ನಿಸುತ್ತದೆ.

ರಾಷ್ಟ್ರೀಯವಾಗಿಯಾಗಲೀ, ಅಂತರರಾಷ್ಟ್ರೀಯವಾಗಿಯಾಗಲೀ ಎಡ ಮತ್ತು ಬಲ ಪಂಥೀಯ ತಪ್ಪು ದಾರಿಗಳ ವಿರುದ್ಧ ಸಿ. ಪಿ. ಐ. (ಎಂ) ಹೋರಾಟ ನಡೆಸುತ್ತಿದೆ.

ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದ ಹಾಗೆ ಕಾಂ| ಪ್ರಮೋದ್ ದಾಸ್ ಗುಪ್ತ ಅವರು ವಹಿಸಿದ ಪಾತ್ರ ಸಿ. ಪಿ. ಐ. (ಎಂ) ನ ಕೇಂದ್ರ ನಾಯಕತ್ವಕ್ಕೆ ವಿರುದ್ಧವಾದುದಾಗಿರಲಿಲ್ಲ.

ಕಾಂ| ಪ್ರಮೋದ್ ದಾಸ್ ಗುಪ್ತರವರ ಸಾವಿನಿಂದ ಸಿ. ಪಿ. ಐ. (ಎಂ) ಮತ್ತು ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ನಡುವಿನ ಮೈತ್ರಿಯ ಹಾದಿಯಲ್ಲಿದ್ದ ಪ್ರಮುಖ ಅಡ್ಡಿ ನಿವಾರಣೆಯಾಗಿದೆಯೆಂಬ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಅಭಿಪ್ರಾಯವು ಧೀರ ನಾಯಕರೊಬ್ಬರಿಗೆ, ಉಜ್ವಲ ಹೋರಾಟಗಳ ಪರಂಪರೆಯಿರುವ ಪಶ್ಚಿಮ ಬಂಗಾಳದ ಹೋರಾಟಗಾರರಿಗೆ ಮತ್ತು ಅದಕ್ಕೆ ನಾಯಕತ್ವ ನೀಡುತ್ತಿರುವ ಸಿ. ಪಿ. ಐ. (ಎಂ)ಗೆ ಅಗೌರವ ತರುವಂತಹ ಪ್ರಯತ್ನವಾಗಿದೆ.

ನಮ್ಮ ಅತ್ಯುತ್ತಮ ನಾಯಕರೊಬ್ಬರನ್ನು ಕಳೆದುಕೊಂಡು ದುಃಖಕ್ಕೆ ಈಡಾಗಿರುವ ಈ ಸಂದರ್ಭದಲ್ಲಿ ಇಂತಹ ಒಂದು ವರದಿ ಡೆಕ್ಕನ್ ಹೆರಾಲ್ಡ್‌ನಲ್ಲಿ ಪ್ರಕಟಗೊಂಡದ್ದು ತೀರಾ ನೋವಿನ ಸಂಗತಿಯಾಗಿದೆ. ●

ಎಸ್.ಎಫ್.ಐ. ರಾಜ್ಯ ಸಮ್ಮೇಳನ ಮುಂದೂಡಿಕೆ

ಜನವರಿ 5 ರಂದು ಕರ್ನಾಟಕ ರಾಜ್ಯ ವಿಧಾನ ಸಭೆಗೆ ಚುನಾವಣೆಯು ನಡೆಯುತ್ತಿರುವುದರಿಂದ ಇದೇ ಡಿಸೆಂಬರ್ ತಿಂಗಳಿನಲ್ಲಿ ನಡೆಸಲು ಉದ್ದೇಶಿಸಿದ್ದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.)ನ ನಾಲ್ಕನೆಯ ರಾಜ್ಯ ಸಮ್ಮೇಳನವನ್ನು ಅನಿವಾರ್ಯವಾಗಿ ಮುಂದೂಡಲಾಗಿದೆಯೆಂದು ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ತಿಳಿಸಿದ್ದಾರೆ.

ಎಸ್. ಎಫ್. ಐ. ಚಟುವಟಿಕೆಗಳು

ರಾಯಚೂರು ಜಿಲ್ಲಾ ಸಮ್ಮೇಳನ

ಎಸ್. ಎಫ್. ಐ. ನ ಎರಡನೆಯ ರಾಯಚೂರು ಜಿಲ್ಲಾ ಸಮ್ಮೇಳನ ನವೆಂಬರ್ 28, 29ರಂದು ಸಿಂಧನೂರಿನಲ್ಲಿ ನಡೆಯಿತು. 28 ರಂದು ಬೆಳಿಗ್ಗೆ ಜಿಲ್ಲಾ ಸಮಿತಿ ಅಧ್ಯಕ್ಷರಾಗಿದ್ದ ಕಾಂ| ವಿರೂಪಾಕ್ಷ ಹಿರೇಮಠ್‌ರವರು ಧ್ವಜಾರೋಹಣ ಮಾಡಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಎಸ್. ಎಫ್. ಐ. ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಕಾಂ| ಎಸ್. ಆರ್. ಆರಾಧ್ಯ ವಹಿಸಿದ್ದರು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಪ್ರೊ|| ಆರ್. ಕೆ. ಹುಡ್ಗಿ ಅವರು ವಿದ್ಯಾರ್ಥಿಗಳು ವೈಚಾರಿಕ ಪ್ರಜ್ಞೆ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ಒಟ್ಟು 2514 ಸದಸ್ಯರನ್ನು ಪ್ರತಿನಿಧಿಸಿ ಏಳು ತಾಲ್ಲೂಕುಗಳಿಂದ 76 ಪ್ರತಿನಿಧಿಗಳು ಮತ್ತು 18 ಮಂದಿ ವೀಕ್ಷಕರು ಭಾಗವಹಿಸಿದ್ದರು. ಇದರಲ್ಲಿ 31 ಮಂದಿ ಹೈಸ್ಕೂಲು ವಿದ್ಯಾರ್ಥಿಗಳು ಮತ್ತು 10 ಮಂದಿ ವಿದ್ಯಾರ್ಥಿನಿಯರಿದ್ದರು.

ಸಮ್ಮೇಳನವು 11 ಮಂದಿಯನ್ನೊಳಗೊಂಡ ಜಿಲ್ಲಾ ಸಮಿತಿಯನ್ನು ಚುನಾಯಿಸಿತು. ಅಧ್ಯಕ್ಷರಾಗಿ ಕಾಂ| ಕೆ. ಬಸವರಾಜ್, ಉಪಾಧ್ಯಕ್ಷರಾಗಿ ಕಾಂ| ವೆಂಕೋಬಿ, ಪ್ರಧಾನ ಕಾರ್ಯದರ್ಶಿಯಾಗಿ ಕಾಂ| ವೀರಭದ್ರಗೌಡ, ಸಹ ಕಾರ್ಯದರ್ಶಿಯಾಗಿ ಅನಿಲ್ ಕುಮಾರ್ ಮತ್ತು ಖಜಾಂಚಿಯಾಗಿ ಕಾಂ| ಮಂಜುಳಾ ಆಯ್ಕೆಯಾದರು.

ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ 20-11-82 ರಂದು ಎಸ್. ಎಫ್. ಐ ಘಟಕವನ್ನು ಸ್ಥಾಪಿಸಲಾಗಿದೆ. ಕಾಲೇಜು ಹಾಗೂ ಹೈಸ್ಕೂಲ್ ಸದಸ್ಯರನ್ನೊಳಗೊಂಡ 18 ಜನರ ಸಮಿತಿಯೊಂದನ್ನು ರಚಿಸಲಾಗಿದೆ.

ಹೊಸಪೇಟೆ :

ದಿನಾಂಕ 5-11-82 ರಂದು ಸುರಿದ ಭಾರೀ ಮಳೆಯಿಂದಾಗಿ ಬಸವನ ಕಾಲುವೆಯು ಒಡೆದ ಕಾರಣದಿಂದಾಗಿ ನಗರ ಬಾಲಿಕಿಯರ ಪ್ರೌಢ ಶಾಲೆಯಲ್ಲಿ ನೀರು ನಿಂತು ಶಾಲೆಯ ಒಂದು ಕೋಣೆ ಬೀಳುವ ಸ್ಥಿತಿಯಲ್ಲಿತ್ತು. ಇದನ್ನರಿತ ಅದೇ ಶಾಲೆಯ ಎಸ್. ಎಫ್. ಐ. ಅಧ್ಯಕ್ಷರಾದ ಕಾಂ| ನಾಗರತ್ನ ಹಾಗೂ ಕಾರ್ಯದರ್ಶಿಗಳಾದ ಕಾಂ| ಕೆಂಚಮ್ಮ ಅವರುಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿ ಬೇರೆ ಸ್ಥಳದ ವ್ಯವಸ್ಥೆ ಮಾಡುವಂತೆ ಒತ್ತಾಯಿಸಿ ಯಶಸ್ವಿಯಾದರು.

ಅಲ್ಪ ಸಂಖ್ಯಾತರ ಹಾಗೂ ಕನ್ನಡಿಗರ ಮೇಲೆ ಗೋವಾದಲ್ಲಿ ಆದ ದೌರ್ಜನ್ಯವನ್ನು ಖಂಡಿಸಲು ಎಸ್.ಎಫ್.ಐ., ಡಿ.ವೈ ಎಫ್.ಐ. ಹಾಗೂ ಇತರ ಸಂಘಟನೆಗಳು 14-11-82 ರಂದು ಪ್ರತಿಭಟನಾ ಸಭೆಯನ್ನು ನಡೆಸಿದುವು.

ಬಳ್ಳಾರಿ :

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯಲ್ಲಿ ದಿನಾಂಕ 25-11-82ರಂದು ಸ್ಥಳೀಯ ಎಸ್. ಎಫ್. ಐ. ಘಟಕವು ವಿದ್ಯಾರ್ಥಿನಿಯರಿಗಾಗಿ 'ಜಾನಪದ ಗೀತೆಗಳ ಸ್ಪರ್ಧೆ'ಯನ್ನು ಏರ್ಪಡಿಸಿತ್ತು.

ಈ ಕಾರ್ಯಕ್ರಮದಲ್ಲಿ ಸ್ಥಳೀಯ ಕಾಲೇಜು ಹಾಗೂ ಪ್ರೌಢ ಶಾಲೆಗಳ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮೈಸೂರು :

ದಿನಾಂಕ 24-11-82 ರಂದು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಎಸ್. ಎಫ್. ಐ. ಘಟಕವನ್ನು ಪ್ರಾರಂಭಿಸಲಾಯಿತು. ಅಧ್ಯಕ್ಷರಾಗಿ ಕಾಂ| ಬಿ. ಎಲ್. ಜಯಪ್ರಕಾಶ್, ಉಪಾಧ್ಯಕ್ಷರಾಗಿ ಕಾಂ| ಪದ್ಮನಾಭಯ್ಯ, ಕಾರ್ಯದರ್ಶಿಯಾಗಿ ಪಿ. ಎಂ. ಶಿವಕುಮಾರ್, ಸಹ ಕಾರ್ಯದರ್ಶಿಗಳಾಗಿ ಜಯಪ್ರಕಾಶ್ ಮತ್ತು ಕೆ. ಎಂ. ಮಲ್ಲಿಕಾರ್ಜುನಯ್ಯ ಹಾಗೂ ಖಜಾಂಚಿಯಾಗಿ ಪಿ. ಕೆ. ರವೀಂದ್ರ ಅವರುಗಳು ಚುನಾಯಿತರಾಗಿದ್ದಾರೆ.

ರಾಯಚೂರು :

ಕೊಳಚೆ ನಿವಾಸಿಗಳ ಉಪವಾಸ ಸತ್ಯಾಗ್ರಹ

ಕೊಳಚೆ ಪ್ರದೇಶಗಳ ಅವ್ಯವಸ್ಥೆಯನ್ನು ಪ್ರತಿಭಟಿಸಿ ಸಿ. ಪಿ. ಐ. (ಎಂ) ನಗರ ಸಮಿತಿ ನೇತೃತ್ವದಲ್ಲಿ 30-11-82 ರಿಂದ ಉಪವಾಸ ಸತ್ಯಾಗ್ರಹ ಆರಂಭವಾಗಿದೆ.

ಲಾಲ್‌ಬಹಾದ್ದೂರ್‌ಶಾಸ್ತ್ರಿ ನಗರ ಮತ್ತು ನೀರಭಾವಿಕುಂಟಾ ಕೊಳಚೆ ನಿವಾಸಿಗಳು ದಿನಾಂಕ 30 ರಂದು ಮೆರವಣಿಗೆ ಹೊರಟು, ನಗರ ಸಭೆಯ ಎದುರು ಐದು ಜನರ ತಂಡವೊಂದು ಸತ್ಯಾಗ್ರಹ ಆರಂಭಿಸಿತು.

ಸತ್ಯಾಗ್ರಹ ಶಿಬಿರದ ಎದುರು ನಡೆದ ಸಭೆಯನ್ನುದ್ದೇಶಿಸಿ ಕಾ| ಚಂದ್ರಶೇಖರ ಬಾಳೆ ಮತ್ತು ಕಾಂ| ಪುರುಷೋತ್ತಮ ಮಾತನಾಡಿ, ಕೊಳಚೆ ನಿವಾಸಿಗಳ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಿದರು.

ಜೀತ ಪದ್ಧತಿ : ಕಾಂಗ್ರೆಸ ಸೋಲು

ತ್ರಿಪುರಾ ಸರ್ಕಾರದ ಸಾಧನೆ

ಕೇಂದ್ರ ಹಾಗೂ ರಾಜ್ಯ ಮಟ್ಟಗಳಲ್ಲಿ ಕಾಂಗ್ರೆಸ್ ಸರಕಾರಗಳು ಹಾಗೂ ಅದರ ನಾಯಕರು ದೇಶದ ಜೀತ ಪದ್ಧತಿಯ ಅಮಾನುಷ ಸ್ಥಿತಿಯ ಕುರಿತಾಗಿ ದೊಡ್ಡ ದೊಡ್ಡ ಮಾತುಗಳನ್ನು ಬಹಳ ಹಿಂದಿನಿಂದಲೂ ನಡೆಸುತ್ತಿದ್ದಾರೆ. ಆದರೆ ಅದರ ನಿರ್ಮೂಲನೆಗಾಗಿ ಅವರು ನಿಜವಾಗಿ ಮಾಡಿದ್ದಾದರೂ ಏನು ?

ದೇಶ ಸ್ವಾತಂತ್ರ್ಯ ಗಳಿಸಿ ಮೂವತ್ತು ವರ್ಷಗಳ ನಂತರ ಅಂದರೆ 1976ರಲ್ಲಿ ಜೀತ ಪದ್ಧತಿ ಶಾಸನ ಜಾರಿಯಾಯಿತು. ಇದು ಕಾಂಗ್ರೆಸ್ ನಾಯಕರ ನಿರ್ಲಕ್ಷ್ಯತೆಗೆ ಹಿಡಿದ ಕನ್ನಡಿ. ಇಂದಿರಾ ಗಾಂಧಿಯವರು ಹೇರಿದ್ದ ಆಂತರಿಕ ತುರ್ತು ಪರಿಸ್ಥಿತಿಯಿಂದ ಜನತೆ ರೋಸಿ ಹೋಗಿದ್ದ ಬಿಕ್ಕಟ್ಟಿನ ಸಂದರ್ಭದಲ್ಲಿ ಜನರಲ್ಲಿ ಭ್ರಮೆಯನ್ನು ಸೃಷ್ಟಿಸುವುದಕ್ಕಾಗಿ ಈ ಕಾನೂನನ್ನು ಜ್ಯಾರಿಗೊಳಿಸಲಾಯಿತೆಂಬುದು ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶ. ಬಡವರ ಬಗೆಗಿನ ಆಕೆಯ ಕಳಕಳಿ ಕೇವಲ ಸಾರ್ವಜನಿಕರ ಒಲವನ್ನು ಗಳಿಸಿಕೊಳ್ಳುವಷ್ಟಕ್ಕೆ ಮಾತ್ರ ಉಳಿದು ಪ್ರಥಮ ಇಪ್ಪತ್ತು ಅಂಶದ ಕಾರ್ಯಕ್ರಮದೊಳಗೆ ನುಸುಳಿಕೊಂಡಿತು.

ಸರಕಾರಿ ಹಾಗೂ ಖಾಸಗಿ ಏಜೆನ್ಸಿಗಳು ನಡೆಸಿದ ವಿವಿಧ ಸಮೀಕ್ಷೆಗಳು ನಿಜಸ್ಥಿತಿಯನ್ನು ಬಯಲಿಗೆಳೆದಿವೆ. ಮತ್ತು ಇದರ ವಿವರಗಳು ದೇಶದ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಆದರೆ ಜೀತ ಪದ್ಧತಿಯ ನಿಜವಾದ ಸ್ಥಿತಿಯೇನು ?

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಕಮೀಷನರ್‌ರವರ ವರದಿಯ ಕಡೆಗೆ ದೃಷ್ಟಿ ಹಾಯಿಸಿದ ಯಾರಿಗಾದರೂ ಭಾರತದ ಜೀತ ಪದ್ಧತಿಯ ಭೀಕರ ಸ್ವರೂಪ ಅರಿವಾಗುತ್ತದೆ. ಸೆ. 8, 1981 ರಂದು ರಾಷ್ಟ್ರಪತಿಯವರಿಗೆ ಸಲ್ಲಿಸಲಾಗಿರುವ ಇತ್ತೀಚಿನ 27ನೇ ವರದಿಯು ಭಾರತದಲ್ಲಿರುವ ಜೀತ ಪದ್ಧತಿಯ ಕರುಣಾಜನಕ ಸ್ಥಿತಿಯನ್ನು ತಿಳಿಸುತ್ತದೆ. ಮತ್ತು ಭಾರತದಲ್ಲಿ ಜೀತಪದ್ಧತಿ ನಿರ್ಮೂಲನವಾಗಿದೆಯೆಂಬ ಭ್ರಮೆಯನ್ನು ಸೃಷ್ಟಿಸಿರುವ ಬಂಡವಾಳಶಾಹಿ ಭೂಮಾಲಿಕ ಸರಕಾರಗಳಿಗೆ ಭಾರೀ ಒದೆತ ಕೊಟ್ಟಿದೆ.

ಕಮೀಷನರ್‌ರವರ ವರದಿ ಈ ರೀತಿ ಇದೆ: "ಜೀತ ಪದ್ಧತಿಯ ರೂಪದಲ್ಲಿ ಮನುಷ್ಯರನ್ನು ಮಾರಾಟದ ಸರಕನ್ನಾಗಿ ಪರಿವರ್ತಿಸಿರುವ ಪದ್ಧತಿಯು ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಹೆಸರಿನಲ್ಲಿ ಆಚರಣೆಯಲ್ಲಿದೆ. ಈ ಪದ್ಧತಿಯನ್ನು ರದ್ದುಗೊಳಿಸಲು ಕೆಲವು ರಾಜ್ಯ ಸರಕಾರಗಳು ಶಾಸನಗಳನ್ನು ಜ್ಯಾರಿಗೊಳಿಸಿವೆಯಾದರೂ ಹೇಳಿಕೊಳ್ಳುವಂಥಹ ಯಶಸ್ಸನ್ನು ಅವುಗಳು ಸಾಧಿಸಲಾಗಿಲ್ಲ." (ಪುಟ–26)

ವಿವಿಧ ಸಮೀಕ್ಷೆಗಳು ಹಾಗೂ ವರದಿಗಳು ಸಮಾಜದ ಈ ಹೀನ ಪದ್ಧತಿಯನ್ನು ಪದೇ ಪದೇ ಬಹಿರಂಗಗೊಳಿಸಿದ ಕಾರಣದಿಂದಾಗಿಯೇ ಕೇಂದ್ರ ಸರಕಾರವು ಈ ಶಾಸನವನ್ನು ಜ್ಯಾರಿಮಾಡಬೇಕಾಯಿತೆಂದು ಕಮೀಷನರ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಆದರೆ ಈ ಶಾಸನವನ್ನು ಕಾರ್ಯರೂಪಕ್ಕಿಳಿಸಿದ ಬಗ್ಗೆಯೂ ಕಮೀಷನರ್ ಅವರಿಗೆ ತೀವ್ರ ಅಸಮಾಧಾನವಿದೆ. ಏಕೆಂದರೆ ಜೀತದಾಳುಗಳನ್ನು ಗುರುತಿಸುವಲ್ಲಿ ಕೂಡ ಸರಕಾರಗಳು ಸೋತಿವೆಯೆಂಬ ಅಭಿಪ್ರಾಯ ಅವರದು.

ಗಾಂಧಿ ಶಾಂತಿ ಪ್ರತಿಷ್ಠಾನದವರು ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಹಭಾಗಿತ್ವದೊಂದಿಗೆ ನಡೆಸಿದ ಅಪೂರ್ಣ ಹಾಗೂ ಪ್ರಾರಂಭಿಕ ಸಮೀಕ್ಷೆಯೊಂದು' ಒರಿಸ್ಸಾ ರಾಜ್ಯವನ್ನುಳಿದು ಇತರ ರಾಜ್ಯಗಳಲ್ಲಿ 22.4 ಲಕ್ಷ ಜೀತದಾಳುಗಳಿದ್ದಾರೆಂದು ತಿಳಿಸಿದೆ. ಗಾಂಧಿ ಶಾಂತಿ ಪ್ರತಿಷ್ಠಾನದ ವರದಿ ಪೂರ್ಣಗೊಂಡರೆ, ಜೀತದಾಳುಗಳ ಸಂಖ್ಯೆ ಈಗ ನಾವು ಭಾವಿಸಿರುವುದಕ್ಕಿಂತಲೂ ಹೆಚ್ಚಾಗಿರುತ್ತದೆಂಬುದು ಶತಸಿದ್ಧವಾಗಿದೆ. "ಕೇಂದ್ರ ಸರಕಾರವು ಅಧಿಕೃತವಾಗಿ ನೀಡಿರುವ ಜೀತದಾಳುಗಳ ಕುರಿತಾದ ಹೇಳಿಕೆಯು ತಪ್ಪಾದ ಹೇಳಿಕೆಯಾಗಿದೆ. ಜುಲೈ 14, 1982 ರಂದು ಕಾರ್ಮಿಕ ಉಪಮಂತ್ರಿಯವರು "ಗುರಿತಿಸಲ್ಪಟ್ಟ ಜೀತದಾಳುಗಳ ಸಂಖ್ಯೆಯು ದೇಶದಲ್ಲಿ ಈ ವರ್ಷದ ಮಾರ್ಚ್ 31ರ ಪ್ರಕಾರ 139, ರಾಜ್ಯ ಸರಕಾರಗಳಿಂದ ಪಡೆದಿರುವ ಮಾಹಿತಿಗಳ ಪ್ರಕಾರ 494" ಮಾತ್ರ ಎಂಬುದಾಗಿ ಲೋಕಸಭೆಯಲ್ಲಿ ತಿಳಿಸಿದ್ದಾರೆ. (ದಿ ಹಿಂದೂಸ್ತಾನ್ ಟೈಮ್ಸ್, ಜುಲೈ 15).

ಗಾಂಧಿ ಶಾಂತಿ ಪ್ರತಿಷ್ಠಾನದವರು ನೀಡಿರುವ ಅಂಕೆ ಅಂಶಗಳು ಅಂತಿಮವಲ್ಲವೆಂಬ ಅಂಶವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಕಮೀಷನರ್‌ರವರು ಒತ್ತಿ ಹೇಳಿದ್ದಾರೆ. "ಜೀತದಾಳುಗಳನ್ನು ಗುರುತಿಸುವ ಕಾರ್ಯವನ್ನು ರಾಜ್ಯ ಕಾರ್ಮಿಕ ಇಲಾಖೆಯ ಸಹಭಾಗಿತ್ವದೊಂದಿಗೆ ಸಂಶೋಧನಾ ಸಂಸ್ಥೆ ಅಥವಾ ವಿಶ್ವವಿದ್ಯಾಲಯವು ಜೀತ ಪದ್ಧತಿ ಆಚರಣೆಯಲ್ಲಿರಬಹುದಾದ ಪ್ರದೇಶಗಳಲ್ಲಿ ಸಮೀಕ್ಷಾ ಕಾರ್ಯಗಳನ್ನು ಕೈಗೊಂಡರೆ ಶೀಘ್ರದಲ್ಲಿಯೆ ನಿಖರವಾದ ಸಂಖ್ಯೆಯನ್ನು ಪತ್ತೆಹಚ್ಚುವುದು ಸಾಧ್ಯವಾಗುತ್ತದೆ." (ಪುಟ 27) ಎಂಬ ಸಲಹೆಯನ್ನು ಇವರು ಮಂಡಿಸಿದ್ದಾರೆ ರಾಜ್ಯ ಸರಕಾರಗಳು ಒದಗಿಸಿರುವ ಅಂಕೆ ಸಂಖ್ಯೆಗಳು ಅಪೂರ್ಣವಾದವುಗಳು ಮತ್ತು ಲೋಕ ಸಭೆಯಲ್ಲಿ ನೀಡಿರುವ ಸಂಖ್ಯೆಯು ಪೂರ್ಣ ಚಿತ್ರವನ್ನು ಕೊಡುವುದಿಲ್ಲ ಎಂಬುದನ್ನು ಕಮೀಷನರ್ ಅವರ ಸಲಹೆಯು ಸ್ಪಷ್ಟವಾಗಿ ತಿಳಿಸುತ್ತದೆ.

ಕಮೀಷನರ್‌ರವರು ಸಂಗ್ರಹಿಸಿರುವ ಮಾಹಿತಿಗಳ ಪ್ರಕಾರ ಜೀತದಾಳುಗಳ ಸಂಖ್ಯೆಯು ಈ ರೀತಿ ಇದೆ. (*ಕೆಳಗಿನ ಪಟ್ಟಿಯನ್ನು ನೋಡಿ).

ಕಮೀಷನರ್‌ರವರು ವಿ ಮ ರ್ಶೆ ಮಾಡುತ್ತಾ "ಬಿಡುಗಡೆಗೊಳಿಸಲ್ಪಟ್ಟ ಜೀತದಾಳುಗಳಿಗೆ ಪುನರ್ವಸತಿ ಒದಗಿಸುವ ಕಾರ್ಯ ತೃಪ್ತಿಕರವಾಗಿಲ್ಲವೆಂಬುದನ್ನು ಈ ಪಟ್ಟಿಯು ತೋರಿಸಿಕೊಡುತ್ತದೆ" ಎಂಬುದಾಗಿ ಹೇಳುತ್ತಾರೆ.

ನಿರುತ್ಸಾಹಕರ :

ಕಾಂಗ್ರೆಸ್ (ಐ) ಆಡಳಿತದ ರಾಜ್ಯಗಳಲ್ಲಿನ ಜೀತದಾಳುಗಳ ಪುನರ್ವಸತಿ ಕಾರ್ಯ ತೀರಾ ಅಸಮಾಧಾನಕರವಾಗಿದೆ. ಕೇಂದ್ರ ಸರಕಾರವು ಕೇವಲ ತೋರಿಕೆಗೋಸ್ಕರ ಜೀತದಾಳುಗಳ ಪುನರ್ವಸತಿಗಾಗಿ ಕೊಂಚ ಹಣವನ್ನು ಮಂಜೂರು ಮಾಡುತ್ತದೆ. ಆದರೆ ಈ ಹಣವನ್ನು ಕೂಡ ಕಾಂಗ್ರೆಸ್ (ಐ) ರಾಜ್ಯ ಸರಕಾರಗಳು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ, ಅದೂ ಅಲ್ಲದೆ ಅನೇಕ ಸಂಧರ್ಭಗಳಲ್ಲಿ ಮಂಜೂರಾತಿಯ ಹಣಕ್ಕಾಗಿ ಕೇಂದ್ರ ಸರಕಾರಕ್ಕೆ ಬೇಡಿಕೆಗಳನ್ನು ಸಲ್ಲಿಸುತ್ತಿಲ್ಲ. ಕೇಂದ್ರ ಸರಕಾರವು ಪುನರ್ವಸತಿಗಾಗಿ ನೀಡುವ ಶೇಕಡಾ 50 ರಷ್ಟು ನೆರವಿಗೆ ರಾಜ್ಯಗಳು ತಮ್ಮ ಪಾಲನ್ನು ಒದಗಿಸುತ್ತಿಲ್ಲ. ಈ ಬಗ್ಗೆ ಕಮೀಷನರ್‌ರವರು ವಿಮರ್ಶಿಸುತ್ತ "ಜೀತದಾಳುಗಳ ಪುನರ್ವಸತಿಗಾಗಿ ಕೇಂದ್ರ ಸರಕಾರವು ನೆರವು ನೀಡಲು ಸಿದ್ಧವಾಗಿರುವಾಗ ಕೂಡ ರಾಜ್ಯ ಸರಕಾರಗಳು ಮುಂದೆ ಬರುತ್ತಿಲ್ಲವೆಂಬುದು ಆಶ್ಚರ್ಯಕರವಾಗಿದೆ" ಎಂದು ಹೇಳಿದ್ದಾರೆ. (ಪುಟ 29)

ಕಾಂಗ್ರೆಸ್ (ಐ) ಸರಕಾರಗಳ ಈ ನಿರ್ಲಕ್ಷ್ಯದೃಷ್ಟಿಗೆ ವಿರುದ್ಧವಾಗಿ ತ್ರಿಪುರಾದ ಎಡರಂಗ ಸರಕಾರವು ಜೀತ ಪದ್ಧತಿಯ ಕುರಿತು ತೋರಿಸುತ್ತಿರುವ ಗಂಭೀರವಾದ ಕಳಕಳಿಯನ್ನು ಕಮೀಷನರ್‌ರವರು ಮುಕ್ತ ಮನಸ್ಸಿನಿಂದ ಹೊಗಳಿದ್ದಾರೆ. ಬಿಹಾರದ ಗುಡ್ಡಗಾಡು ಯುವಕರನ್ನು, ತ್ರಿಪುರಾದ ಕೆಲವು ಇಟ್ಟಿಗೆ ತಯಾರಿಕೆಯ ಖಾಸಗಿ ಕ್ಷೇತ್ರಗಳಲ್ಲಿ ಬಳಸಿಕೊಳ್ಳುತ್ತಿರುವುದನ್ನು ಕಮೀಷನರ್‌ರವರ ಗಮನಕ್ಕೆ ತರಲಾಯಿತು.

ತ್ರಿಪುರಾದ ದಾಖಲೆ :

ತ್ರಿಪುರಾದ ಎಡರಂಗ ಸರಕಾರದ ಗಮನಕ್ಕೆ ಜೀತಪದ್ಧತಿಯ ಪ್ರಕರಣಗಳು ಬಂದೊಡನೆ, ಅವುಗಳನ್ನು ಕ್ರೂರ 'ಸರದಾರರ' ಹಿಡಿತದಿಂದ ವಿಮೋಚನೆಗೊಳಿಸಲು ಬಹಳ ಶೀಘ್ರವಾಗಿ ಕಾರ್ಯೋನ್ಮುಖಗೊಳ್ಳುತ್ತಿದೆ. ಕಮೀಷನರ್‌ರವರು ತಮ್ಮ ವರದಿಯಲ್ಲಿ ಹೀಗೆ ಹೇಳಿದ್ದಾರೆ : "ತ್ರಿಪುರಾದ ಎರಡು ಇಟ್ಟಿಗೆ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದ 94 ಜನ ಜೀತದಾಳುಗಳನ್ನು ಸರಕಾರವು ಬಿಡುಗಡೆಮಾಡಿ ಅವರಿಗೆ ಊಟ, ವಸತಿಯನ್ನು ಒದಗಿಸಲಾಗಿದೆ. ಈ ಕಾರ್ಮಿಕರಿಗೆ ಬರಬೇಕಾಗಿದ್ದ ಬಾಕಿ ಹಣವನ್ನು ರಾಜ್ಯ ಗುಡ್ಡಗಾಡು ಜನರ ಕಲ್ಯಾಣ ಇಲಾಖೆ ಪಾವತಿ ಮಾಡಿದೆ. ಈ ಹಣವನ್ನು ನಂತರ ಇಟ್ಟಿಗೆ ಕ್ಷೇತ್ರದ ಮಾಲೀಕರುಗಳಿಂದ ವಸೂಲಿ ಮಾಡಲಾಗುತ್ತದೆ. ಈ ಕಾರ್ಮಿಕರನ್ನು ಸರಕಾರೀ ರಕ್ಷಣೆಯೊಂದಿಗೆ ಎರಡು ಗುಂಪುಗಳಲ್ಲಿ

(6ನೇ ಪುಟ ನೋಡಿ)

ಕ್ರ.ಸಂಖ್ಯೆ *	ರಾಜ್ಯ	ಜೀತ ಪ್ರಕರಣಗಳ ಕುರಿತು ಗಾಂಧೀ ಪ್ರತಿಷ್ಠಾನದ ಅಂದಾಜು	ಗುರುತಿಸಲ್ಪಟ್ಟ ಜೀತದಾಳುಗಳ ಸಂಖ್ಯೆ (31–1—1981ರವರೆಗೆ) ಗುರುತಿಸಲ್ಪಟ್ಟವರು ಮತ್ತು ವಿಮುಕ್ತರು	ಕೇಂದ್ರದ ಯೋಜನೆಯಡಿಯಲ್ಲಿ ಯೋಜನೆಗಳ ಅಡಿಯಲ್ಲಿ	1978–79 ರಲ್ಲಿ	ಸಹಾಯಧನ ಪಡೆದವರ ಸಂಖ್ಯೆ 1980-81	1980–81 ರವರೆಗೆ	ಪುನರ್ವಸತಿ ಪಡೆದವರ ಒಟ್ಟು ಸಂಖ್ಯೆ	ಪುನರ್ವಸತಿ ಯೋಜನೆಗೆ ಒಳಪಡಬೇಕಿರುವವರು
1	2	3	4	5	6	7	8	9	10
1.	ಆಂಧ್ರ ಪ್ರದೇಶ	3,25,000	12,701	2,880	2,920	1,586	1,760	9,146	3,555
2.	ಬಿಹಾರ	1,11,000	4,603	952	816	369	666	2,803	1,800
3.	ಗುಜರಾತ್	1,71,000	42	42	...	...	...	42	....
4.	ಕರ್ನಾಟಕ	1,93,000	62,699	39,960	527	1,521	10,860	52,868	9,831
5.	ಕೇರಳ	...	700	139	110	60	...	308	393
6.	ಮಧ್ಯ ಪ್ರದೇಶ	4,67,000	1,531	...	58	...	...	58	1,473
7.	ಮಹಾರಾಷ್ಟ್ರ	1,05,000	.....	...	...	....	...	....	...
8.	ಒರಿಸ್ಸಾ	...	52	...	321	16	6	343	...
9.	ರಾಜಸ್ಥಾನ	67,000	6,000	4,256	700	700	344	6,000	...
10.	ತಮಿಳುನಾಡು	2,50,000	27,874	27,311	...	....	359	27,670	204
11.	ಉತ್ತರ ಪ್ರದೇಶ	5,55,000	4,469	1,368	495	2,606	...	4,469	...
	ಒಟ್ಟು	22,44,000	1,20,971	76,907	5,947	6,858	13,995	1,03,707	17,264

ಸರ್ವಾಧಿಕಾರಿ ಶಕ್ತಿಗಳನ್ನು ಹಿಮ್ಮೆಟ್ಟಿಸಲೇಬೇಕು

– ಸೂರ್ಯನಾರಾಯಣರಾವ್

[ಜನವರಿ 5 ರಂದು ಕರ್ನಾಟಕದ ವಿಧಾನ ಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಬೆಂಗಳೂರಿನ ವರ್ತೂರು ಕ್ಷೇತ್ರದಿಂದ ಸ್ಪರ್ಧಿಸಲಿರುವ ಕಾಂ| ಎಸ್. ಸೂರ್ಯನಾರಾಯಣ ರಾವ್ ಅವರೊಡನೆ 'ಐಕ್ಯರಂಗ'ದ ಪ್ರತಿನಿಧಿಯು ನಡೆಸಿದ ಸಂದರ್ಶನದ ವರದಿಯನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

—ಸಂಪಾದಕ]

ಸಂದರ್ಶಕ : ಕೇಂದ್ರ ಸರಕಾರ ನಿರೀಕ್ಷೆಗೆ ಮೊದಲೇ ಅಂದರೆ ಜನವರಿ 5ಕ್ಕೆ ಕರ್ನಾಟಕವೂ ಸೇರಿದಂತೆ ಮೂರು ರಾಜ್ಯಗಳಲ್ಲಿ ಚುನಾವಣೆಗಳನ್ನು ಘೋಷಿಸಿದೆ. ಇದರ ಹಿಂದಿನ ಉದ್ದೇಶವಾದರೂ ಏನಿರಬಹುದು ?

ಸೂರಿ : ತ್ರಿಪುರಾದಲ್ಲಿ ಚುನಾವಣೆ ಮುಗಿದು ಹೊಸ ಶಾಸನ ಸಭೆ ಜನವರಿ 19 ರೊಳಗೆ ಬರಬೇಕು. ಆದ್ದರಿಂದಾಗಿ ಚುನಾವಣೆಯನ್ನು ಜನವರಿ 5ಕ್ಕೆ ಗೊತ್ತುಪಡಿಸಲಾಯಿತು. ತ್ರಿಪುರಾದಲ್ಲಿ ಚುನಾವಣೆ ನಡೆದು, ಅಲ್ಲಿ ಕಾಂಗ್ರೆಸ್ ಪರಾಭವ ಹೊಂದಿ ನಂತರ ಫೆಬ್ರವರಿ ತಿಂಗಳಲ್ಲಿ ಆಂಧ್ರ ಮತ್ತು ಕರ್ನಾಟಕದಲ್ಲಿ ಚುನಾವಣೆ ನಡೆದರೆ ಕಾಂಗ್ರೆಸ್ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂಬುದು ಒಂದು ಅಂಶವಾದರೆ, ಎರಡನೆಯದು ವಿರೋಧ ಪಕ್ಷಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ಚುನಾವಣೆ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ಕಾಲಾವಕಾಶ ಸಿಗಬಾರದೆಂಬುದು ಕಾಂಗ್ರೆಸ್‌ನ ಉದ್ದೇಶವಾಗಿದೆ.

ಸಂದರ್ಶಕ : ಕರ್ನಾಟಕದ ಇಂದಿನ ರಾಜಕೀಯ ಸಂದರ್ಭದಲ್ಲಿ ಈ ಚುನಾವಣೆಯ ಮಹತ್ವದ ಕುರಿತು ನಿಮ್ಮ ಅಭಿಪ್ರಾಯವೇನು ?

ಸೂರಿ : ಕರ್ನಾಟಕದಲ್ಲಿ ಗುಂಡೂರಾವ್ ಸರಕಾರ ಎಲ್ಲ ವಿಭಾಗಗಳ ಜನರ ಮೇಲೂ ದಾಳಿ–ದಬ್ಬಾಳಿಕೆ ನಡೆಸಿ, ಬ್ರಿಟಿಷ್ ಕಾಲದ ಆಳ್ವಿಕೆಯನ್ನು ಮೀರಿಸಿದೆ. ತನ್ನ ಆಡಳಿತ ಕಾಲದಲ್ಲಿ ಗುಂಡೂರಾವ್ ಸರಕಾರ 120 ಜನರಿಗೂ ಮೇಲ್ಪಟ್ಟು ರೈತ, ಕಾರ್ಮಿಕ ಯುವ ಜನರನ್ನು ಗುಂಡಿಟ್ಟು ಕೊಲೆಮಾಡಿದೆ. ಅನೇಕ ಜನರು ಗುಂಡೇಟಿನಿಂದ ಗಾಯಗೊಂಡಿದ್ದಾರೆ. ಸಾವಿರಾರು ಜನರ ಮೇಲೆ ಲಾಠಿ ಚಾರ್ಜ್ ನಡೆಸಿದೆ. ಸಾವಿರಾರು ಜನರನ್ನು ಬಂಧಿಸಿ, ಪೋಲಿಸ್ ರಾಜ್ಯವನ್ನೇ ಸೃಷ್ಟಿಸಿದೆ. ರೈತರ ಬೇಡಿಕೆಗಳು ಮಾನ್ಯವಾಗಿಲ್ಲ. ಕಾರ್ಮಿಕರ ಸಮಸ್ಯೆಗಳು ಬಗೆಹರಿದಿಲ್ಲ. ಜನರಲ್ಲಿ ಅತೃಪ್ತಿ ಬೆಳೆಯುತ್ತಿದೆ. ಆದ್ದರಿಂದಲೆ ಜನಸಾಮಾನ್ಯರು, ವಿರೋಧ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡು, ವಿರೋಧ ಪಕ್ಷಗಳ ಓಟುಗಳು ಒಡೆಯದಂತೆ ನೋಡಿಕೊಂಡು ಚುನಾವಣಾ ಹೋರಾಟದಲ್ಲಿ ಕಾಂಗ್ರೆಸ್‌ನ್ನು ಪರಾಭವಗೊಳಿಸಬೇಕು. ಆದ್ದರಿಂದಲೇ ಈ ಚುನಾವಣೆಯು ಸರ್ವಾಧಿಕಾರಿ ಶಕ್ತಿಗಳ ವಿರುದ್ಧದ ಹೋರಾಟವಾಗಿ ಮಹತ್ವವನ್ನು ಪಡೆದಿದೆ.


ಸಂದರ್ಶಕ : ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತವನ್ನು ಸೋಲಿಸಬೇಕಾದ ಅವಶ್ಯಕತೆಗೆ ನೀವು ಕೊಡುವ ಕಾರಣಗಳೇನು ?

ಸೂರಿ : ಕಾಂಗ್ರೆಸ್ ಆಡಳಿತದಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿ, ಸಿಮೆಂಟ್ ಹಗರಣ, ಕಳ್ಳಭಟ್ಟಿ ಹಗರಣ, ಸರ್ಕಸ್ ಹಗರಣ ಮುಂತಾದವುಗಳಿಗೆ ಸರ್ಕಾರವೇ ಹೊಣೆಯಾಗಿದೆ. ಸರಕಾರವು ರೈತರ ಬೇಡಿಕೆಗಳನ್ನು ನಿರಾಕರಿಸಿದೆ. ಕಾರ್ಮಿಕರ ಕನಿಷ್ಠ ಕೂಲಿ ವಿಷಯದಲ್ಲಿ ಮಾಲಿಕರಿಂದ ಹಣಪಡೆದು ನಿಗದಿಯಾದ ಕನಿಷ್ಠ ಕೂಲಿಯನ್ನು ಹೈಕೋರ್ಟಿನಲ್ಲಿ ರದ್ದಾಗುವಂತೆ ಮಾಡುವಲ್ಲಿ ಸರಕಾರದ ಪಾತ್ರವಿದೆ. ನಾಗರಿಕರ ಹಕ್ಕುಗಳನ್ನು ಪೋಲಿಸ್ ಆ್ಯಕ್ಟ್ ಮತ್ತು ಸೆಕ್ಷನ್ 133ರ ಪ್ರಕಾರ ನಿಷೇಧಾಜ್ಞೆ ಜ್ಯಾರಿ ಮಾಡುವ ಮೂಲಕ ದಮನಮಾಡುತ್ತಿದೆ. ವಿದ್ಯಾರ್ಥಿಗಳಿಗೆ ಸುಲಭ ದರದಲ್ಲಿ ತಾಂತ್ರಿಕ ಶಿಕ್ಷಣ ದೊರಕದಂತೆ ಕ್ಯಾಪಿಟೇಷನ್ ಫೀಸ್‌ಗಳನ್ನು ಅಧಿಕ ಪ್ರಮಾಣದಲ್ಲಿ ತೆಗೆದುಕೊಳ್ಳಲು ಅವಕಾಶ ನೀಡಿ ವಿದ್ಯಾಭ್ಯಾಸವನ್ನು ಒಂದು ವ್ಯಾಪಾರವನ್ನಾಗಿ ಮಾಡಿದೆ. ಇವೇ ಮೊದಲಾದ ಜನ ವಿರೋಧಿ ನೀತಿಗಳನ್ನು ತಡೆಗಟ್ಟಬೇಕಾದರೆ ಕಾಂಗ್ರೆಸ್ಸನ್ನು ಸೋಲಿಸಲೇಬೇಕು.

ಸಂದರ್ಶಕ : ಕಾಂಗ್ರೆಸ್ ಅಭ್ಯರ್ಥಿಗೆ ಪ್ರತಿಸ್ಪರ್ಧಿಯಾಗಿ ಏಕೈಕ ಅಭ್ಯರ್ಥಿಯನ್ನು ನಿಲ್ಲಿಸಲು ವಿರೋಧ ಪಕ್ಷಗಳು ನಡೆಸುತ್ತಿರುವ ಪ್ರಯತ್ನ ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ?

ಸೂರಿ : ಕಾಂಗ್ರೆಸ್ ಪಕ್ಷವನ್ನು ಸೋಲಿಸಲು, ವಿರೋಧ ಪಕ್ಷಗಳು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿವೆ. ಜನತಾ ಪಕ್ಷ ಭಾರತೀಯ ಜನತಾ ಪಕ್ಷದೊಡನೆ ಈ ಉದ್ದೇಶದಿಂದ ನಡೆಸಿದ ಪ್ರಯತ್ನ ಭಾರತೀಯ ಜನತಾ ಪಕ್ಷದ ಕಾಂಗ್ರೆಸ್ಸನ್ನು ಪರೋಕ್ಷವಾಗಿ ಗೆಲ್ಲಿಸುವ ಧೋರಣೆಯಿಂದಾಗಿ ವಿಫಲಗೊಂಡಿದೆ. ಜನತಾ ಪಕ್ಷ, ಕರ್ನಾಟಕ ಕ್ರಾಂತಿರಂಗ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡು ಜಂಟೀ ಪ್ರಚಾರ ನಡೆಸಲು ತೀರ್ಮಾನಿಸಿವೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಭಾರತೀಯ ಜನತಾ ಪಕ್ಷದೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳದಿದ್ದರೂ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ನೇರ ಸ್ಪರ್ಧೆಮಾಡಿ, ಬಿ.ಜೆ.ಪಿ. ಗೆದ್ದದ್ದೆಯಾದರೆ ಅದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಅಸಂತೋಷವನ್ನುಂಟುಮಾಡುವುದಿಲ್ಲ. ಕಾರಣ ಸರ್ವಾಧಿಕಾರೀ ಪ್ರವೃತ್ತಿಯನ್ನು ಪ್ರತಿನಿಧಿಸುವ ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕೆಂಬುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧೋರಣೆಯಾಗಿದೆ.

ಸಂದರ್ಶಕ : ಒಂದುವೇಳೆ ವಿರೋಧ ಪಕ್ಷಗಳು ಅಧಿಕಾರಕ್ಕೆ ಬಂದಲ್ಲಿ ಅವುಗಳ ನಡುವಿನ ಒಗ್ಗಟ್ಟು ಧೃಡವಾಗಿ ಉಳಿಯುವ ಬಗ್ಗೆ ನಿಮಗೆ ವಿಶ್ವಾಸವಿದೆಯೆ ? ಮತ್ತು ರೈತರ ಕಾರ್ಮಿಕರ ಕುರಿತಾಗಿ ಕಾಂಗ್ರೆಸ್‌ಗಿಂತ ಭಿನ್ನವಾದ ಧೋರಣೆಯನ್ನು ತಳೆಯುತ್ತದೆಂದು ನಿರೀಕ್ಷಿಸಿದ್ದಿರಾ ?



ಕಾಂ| ಸೂರ್ಯನಾರಾಯಣರಾವ್

ಸೂರಿ : ಈ ಪ್ರಶ್ನೆ ಊಹಾಪೋಹದ ಪ್ರಶ್ನೆಯಾಗಿದೆ. ವಿರೋಧ ಪಕ್ಷಗಳು ಅಂದರೆ ಜನತಾ ಪಕ್ಷ ಮತ್ತು ಕರ್ನಾಟಕ ಕ್ರಾಂತಿರಂಗ, ಬಂಡವಾಳಶಾಹಿ ವಿರೋಧ ಪಕ್ಷಗಳು. ಆದ್ದರಿಂದ ಈ ಪಕ್ಷಗಳು ರೈತರ, ಕಾರ್ಮಿಕರ ಸಮಸ್ಯೆಗಳನ್ನು ಯಶಸ್ವಿಯಾಗಿ ಬಗೆಹರಿಸಲು ಪ್ರಾಮಾಣಿಕವಾಗಿ ದುಡಿಯುತ್ತವೆಂದು ತಿಳಿದುಕೊಳ್ಳುವುದೇ ತಪ್ಪು. ಇವುಗಳು ಅಲ್ಪಸ್ವಲ್ಪ ನಾಗರೀಕ ಹಕ್ಕುಗಳನ್ನು ಕೊಟ್ಟು ಸಣ್ಣ ಪುಟ್ಟ ರಿಯಾಯಿತಿ ತೋರಿಸಬಹುದು. ಈ ಕಾರಣದಿಂದ ಕಾಂಗ್ರೆಸ್ ಪಕ್ಷವೇ ಮೇಲು ಎಂದು ಹೇಳಬಾರದು. ಜನ ಸಾಮಾನ್ಯರ ಪ್ರಶ್ನೆಯನ್ನು ಬಗೆಹರಿಸಬೇಕಾದರೆ ನಿರ್ಧಿಷ್ಟ ಧೋರಣೆಗಳುಳ್ಳ ಎಡಪಕ್ಷಗಳ ಪರ್ಯಾಯ ಸರಕಾರವೇ ಮದ್ದು. ಇದಾಗಬೇಕಾದರೆ ಜನಸಾಮಾನ್ಯರ ಪ್ರಶ್ನೆಗಳ ಬಗ್ಗೆ ಸಾಮೂಹಿಕ ಸಂಘಟನೆಗಳು ಐಕ್ಯ ಹೋರಾಟ ನಡೆಸುವ ಮೂಲಕ ಈ ರಂಗ ನಿರ್ಮಾಣವಾಗಬೇಕು.

ಸಂದರ್ಶಕ : ಈ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಷ್ಟು ಸ್ಥಾನಗಳಿಗೆ ಸ್ಪರ್ಧಿಸಲಿದೆ. ಮತ್ತು ಈ ಸ್ಥಾನಗಳಲ್ಲಿ ಗೆದ್ದು ಬಂದರೆ, ಅದರಿಂದ ಕರ್ನಾಟಕದ ರಾಜಕೀಯದಲ್ಲಾಗಬಹುದಾದ ಬದಲಾವಣೆಗಳೇನು?

ಸೂರಿ : ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಆರು ಸ್ಥಾನಗಳಲ್ಲಿ ಸ್ಪರ್ಧಿಸಲು ಪ್ರಯತ್ನಿಸುತ್ತಿದೆ. ಈ ಪಕ್ಷದ ಚುನಾಯಿತ ಪ್ರತಿನಿಧಿಗಳು ಶಾಸನ ಸಭೆಯನ್ನು ಒಂದು ಹೋರಾಟದ ಕಣವನ್ನಾಗಿ ಮಾಡಲು ಪ್ರಯತ್ನಿಸುತ್ತಾರೆ. ಅಂದರೆ ರೈತ–ಕಾರ್ಮಿಕರ ಹಿತರಕ್ಷಣೆಯ ಧೋರಣೆಯನ್ನು ಶಾಸನ ಸಭೆಯಲ್ಲಿ ಎತ್ತಿ ಜನವಿರೋಧಿ ನೀತಿಯನ್ನು ಪ್ರತಿಭಟಿಸಿ ಶಾಸನ ಸಭೆಯ ಒಳಗೂ ಹೊರಗೂ ಆ ವಿಷಯಗಳ ಬಗ್ಗೆ ಹೋರಾಟ ರೂಪಿಸಲು ಪ್ರಯತ್ನಿಸುತ್ತಾರೆ. ಚುನಾಯಿತ ಪ್ರತಿನಿಧಿಗಳು ಸರಕಾರದ ಜನವಿರೋಧಿ ನಿಲುವು ಹಾಗೂ ಧೋರಣೆಗಳನ್ನು ಪ್ರತಿಭಟಿಸಲು, ಸಮಸ್ಯೆಗಳ ಆಧಾರದ ಮೇಲೆ ಶಾಸನ ಸಭೆಯ ಒಳಗೂ ಸಹ ಐಕ್ಯತೆಯನ್ನು ತರಲು ಪ್ರಯತ್ನಿಸುತ್ತಿಸುತ್ತಾರೆ. ಈ ಪ್ರಯತ್ನಗಳಿಂದಾಗಿ ಜನಸಾಮಾನ್ಯರ ಹೋರಾಟಗಳನ್ನು ಚುರುಕುಗೊಳಿಸಲು ಸಾಧ್ಯವಾಗುವುದು.

ಸಂದರ್ಶಕ : ನೀವು ಬೆಂಗಳೂರಿನಲ್ಲಿ ಸ್ಪರ್ಧಿಸುವುದು ಬಹುಪಾಲು ಖಚಿತವೆಂದು ತಿಳಿದು ಬಂದಿದೆ. ನೀವು ಚುನಾವಣೆಯಲ್ಲಿ ಆರಿಸಿ ಬಂದಲ್ಲಿ ಬೆಂಗಳೂರಿನ ಕಾರ್ಮಿಕ ಚಳುವಳಿಯಲ್ಲಿ ಅದರ ಪರಿಣಾಮ ಯಾವ ರೀತಿಯಲ್ಲಿ ಇರುತ್ತದೆ ?

ಸೂರಿ : ನಾನು ಬಹುಭಾಗ ಕಾರ್ಮಿಕ ಕ್ಷೇತ್ರವಾದ ವರ್ತೂರು ಕ್ಷೇತ್ರದಿಂದ ಸ್ಪರ್ಧಿಸಬೇಕೆಂದು ನಮ್ಮ ಪಕ್ಷ ತೀರ್ಮಾನಿಸಿದೆ. ಈ ಕ್ಷೇತ್ರದಲ್ಲಿ ಪಟ್ಟಭದ್ರ ಹಿತಾಶಕ್ತಿಗಳಿವೆ. ಅಂದರೆ, ದೊಡ್ಡ ದೊಡ್ಡ ಕಂಟ್ರಾಕ್ಟರುಗಳು, ಜಮೀನ್ದಾರರುಗಳು, ದೊಡ್ಡ ದೊಡ್ಡ ಕೈಗಾರಿಕಾ ಮಾಲೀಕರು ಇದ್ದಾರೆ. ಇವರಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಗೆಲ್ಲುವುದು ಸಹಿಸುವುದಿಲ್ಲ. ಈ ಕ್ಷೇತ್ರದಲ್ಲಿ ನಾನು ಜಯಗಳಿಸಿದಲ್ಲಿ, ನಾನು ಸಿ. ಐ. ಟಿ. ಯು. ಅಧ್ಯಕ್ಷನಾಗಿರುವುದರಿಂದ ಇದರ ಪ್ರಭಾವ ಕಾರ್ಮಿಕ ವರ್ಗದ ಮೇಲೆ ಬಿದ್ದು ಸಿ.ಐ.ಟಿ.ಯು. ಬಲಿಷ್ಠಗೊಳ್ಳುವುದಲ್ಲದೆ, ಕಾರ್ಮಿಕರ ವರ್ಗರಾಜಕೀಯ ಸಹ ಬೆಳೆಯುವ ಸಾಧ್ಯತೆಯಿದೆ. ಇದು ಪ್ರಗತಿಪರ ಬೆಳವಣಿಗೆಗೆ ಸಹಾಯಕವಾಗುತ್ತದೆ.

ಸಂದರ್ಶಕ : ನೀವು ಚುನಾವಣೆಯಲ್ಲಿ ಆರಿಸಿ ಬಂದಲ್ಲಿ, ಕಾರ್ಮಿಕ ವರ್ಗಕ್ಕೆ ಮತ್ತು ಒಟ್ಟು ಜನ ವಿಭಾಗಕ್ಕೆ ಸಂಬಂಧಿಸಿದ ಹಾಗೆ ನೀವು ಕೈಗೊಳ್ಳುವ ಕಾರ್ಯಗಳೇನು ?

ಸೂರಿ : ನಾನು ಆರಿಸಿ ಬಂದಲ್ಲಿ ಕಾರ್ಮಿಕರ ಹೋರಾಟಗಳಲ್ಲಿ ಪೋಲಿಸರ ಪ್ರವೇಶ ನಿಲ್ಲಿಸಬೇಕೆಂಬ ಮಸೂದೆಯನ್ನು ಮಂಡಿಸುತ್ತೇನೆ. ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ಕೂಲಿ 600ರೂ.ಗಳಾಗಬೇಕೆಂಬ ಬೇಡಿಕೆಯ ಬಗ್ಗೆ ಶಾಸನ ಸಭೆಯೊಳಗೆ ಹೋರಾಟ ಮಾಡುತ್ತೇನೆ. ನಾಗರೀಕ ಹಕ್ಕುಗಳನ್ನು ರಕ್ಷಿಸಲು, ಪೋಲಿಸ್ ದೌರ್ಜನ್ಯ ತಡೆಗಟ್ಟಲು ಶಾಸನ ಸಭೆಯೊಳಗೆ ಇತರೇ ಶಾಸಕರ ಬೆಂಬಲ ತೆಗೆದುಕೊಂಡು ಹೋರಾಡುತ್ತೇನೆ. ಸರಕಾರದ ಎಲ್ಲ ಜನವಿರೋಧಿ ನೀತಿಗಳನ್ನು ಶಾಸನ ಸಭೆಯೊಳಗೆ ಉಗ್ರವಾಗಿ ಎದುರಿಸುತ್ತೇನೆ. ಮತ್ತು ಈ ಪ್ರಶ್ನೆಗಳ ಬಗ್ಗೆ ಕಾರ್ಮಿಕರ ಮತ್ತು ಇತರ ಜನವಿಭಾಗಗಳನ್ನು ಸಂಘಟಿಸಲು ಪ್ರಯತ್ನ ಮಾಡುತ್ತೇನೆ.

ಸಂದರ್ಶಕ : ಭಾರತೀಯ ಜನತಾ ಪಕ್ಷ ವಿರೋಧ ಪಕ್ಷಗಳ ಚುನಾವಣೆ ಹೊಂದಾಣಿಕೆಗೆ ಮೊದಲಿನಿಂದಲೂ ಅಡ್ಡಗಾಲು ಹಾಕುತ್ತ ಬಂದು ಈಗ ತಾನು ಪ್ರತ್ಯೇಕವಾಗಿ ಸ್ಪರ್ಧಿಸುವುದಾಗಿ ಘೋಷಿಸಿದೆ. ಬಿ.ಜೆ.ಪಿ.ಯ ಈ ನಿಲುವಿನಿಂದ ಚುನಾವಣಾ ಹೋರಾಟದಲ್ಲಿ ಆಗಬಹುದಾದ ಅಪಾಯಗಳೇನು ?

ಸೂರಿ : ಭಾರತೀಯ ಜನತಾ ಪಕ್ಷದ ನಿಲುವು ಬೇರೆ ಪಕ್ಷಗಳು ಬೆಳೆಯಬಾರದು, ಅದರಲ್ಲೂ ವರ್ಗರಾಜಕೀಯ ಹೊಂದಿರುವ ಪಕ್ಷಗಳು ದೇಶದಲ್ಲೇ ಇರಬಾರದು ಎಂಬುದಾಗಿದೆ. ಭಾರತೀಯ ಜನತಾ ಪಕ್ಷವು ದೇಶಾದ್ಯಂತ ಪ್ರಭಲವಾಗುವವರೆಗೆ ಕಾಂಗ್ರೆಸ್ ಪಕ್ಷವೇ ಆಡಳಿತ ನಡೆಸಬೇಕು ಎಂಬ ಧೋರಣೆಯನ್ನು ಹೊಂದಿದೆ. ಆದ್ದರಿಂದಲೇ ಕೇರಳದಲ್ಲಿ ತಾನು ಎಪ್ಪತ್ತು ಸ್ಥಾನಗಳಲ್ಲಿ ಸ್ಪರ್ಧಿಸಿ, ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ಸಿಗೆ ಬೆಂಬಲಕೊಟ್ಟು ಎಡಪಕ್ಷಗಳ ಒಕ್ಕೂಟ ಸೋಲಲು ಮುಖ್ಯ ಕಾರಣವಾಗಿದೆ. ಕರ್ನಾಟಕದಲ್ಲಿ ಬಿ.ಜೆ.ಪಿ.ಯು ನೂರ ಇಪ್ಪತ್ತು ಸ್ಥಾನಗಳಿಗೆ ಸ್ಪರ್ಧಿಸುವ ತೀರ್ಮಾನವು ಕಾಂಗ್ರೆಸ್ಸಿಗೆ ಅನುಕೂಲ ಮಾಡಿಕೊಡುತ್ತಿದೆ. ಇದನ್ನು ಮತದಾರರು ಅರ್ಥ ಮಾಡಿಕೊಂಡರೆ ತ್ರಿಕೋಣ ಸ್ಪರ್ಧೆಯಿದ್ದರೂ ಕೂಡ ಮತಗಟ್ಟೆಯಲ್ಲಿ ಕಾಂಗ್ರೆಸ್‌ನ್ನು ಇತರ ವಿರೋಧ ಪಕ್ಷಗಳು ಸೋಲಿಸಬಹುದು.

●

ಕಾಲೇಜಿನ ಅವ್ಯವಹಾರಗಳ ತನಿಖೆಗೆ ಒತ್ತಾಯ

ಬಳ್ಳಾರಿಯ ವೀರಶೈವ ಕಾಲೇಜಿನ ದುರಾಡಳಿತವನ್ನು ಪ್ರತಿಭಟಿಸಿ ಎಸ್.ಎಫ್.ಐ., ಎ.ಐ.ಎಸ್.ಎಫ್. ಮತ್ತು ಎ. ಬಿ. ವಿ. ಪಿ. ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ನವೆಂಬರ್ 30 ರಂದು ಸಾವಿರಾರು ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. ಕಾಲೇಜಿನ ದುರ್ವ್ಯವಹಾರಗಳ ಬಗ್ಗೆ ಕೂಡಲೇ ತನಿಖೆ ನಡೆಸಬೇಕೆಂದು ಎಸ್. ಎಫ್. ಐ. ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯರವರು ಜಿಲ್ಲಾಧಿಕಾರಿಗಳಿಗೆ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

ಪ್ರಮೋದ್ ದಾಗೆ ವಿದಾಯ


—ಎನ್ಕೆ

"ಕಾಂ| ಪ್ರಮೋದ್ ದಾಸ್ ಗುಪ್ತಾ ಲಾಲ್ ಸಲಾಮ್, ಲಾಲ್‌ಸಲಾಮ್", "ದುನಿಯಾಕೆ ಮಜದೂರ ಏಕ್ ಹೋ ಜಾವ್," "ಇಂಕ್ವಿಲಾಬ್ ಜಿಂದಾಬಾದ್"—ಬಾನನ್ನೇ ಭೇದಿಸುವ ಲಕ್ಷಾಂತರ ಕಂಠಗಳಿಂದ ಮಾರ್ಧನಿತಗೊಂಡ ಘೋಷಣೆಗಳು ಕೇಳಿ ಬಂದದ್ದು ಕಾಂ| ಪ್ರಮೋದ್ ದಾಸ್ ಗುಪ್ತಾರ ದೇಹವನ್ನು ವಿದ್ಯುತ್ ಚಿತೆಯ ಮೇಲಿಟ್ಟು ಗುಂಡಿ ಒತ್ತಿದಾಗ

43 ವರ್ಷದ ನನ್ನ ರಾಜಕೀಯ ಜೀವನದಲ್ಲಿ ಎಂದೆಂದಿಗೂ ಮರೆಯಲಾಗದ ಘಟನೆ ಪ್ರಮೋದ್ ದಾಸ್ ಗುಪ್ತಾರ ವಿದಾಯ ಯಾತ್ರೆ. ಪಕ್ಷದ ಕರ್ನಾಟಕ ಘಟಕದ ಪರವಾಗಿ ವಿದಾಯ ಯಾತ್ರೆಯಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್‌ಗೆ ನಾನು ಕೃತಜ್ಞ.

ಚುನಾವಣೆಯ ವಿಜಯೋತ್ಸವ, ಮಠಾಧಿಪತಿಗಳ ಅಡ್ಡ ಪಲ್ಲಕ್ಕಿಗಳ ಮೆರವಣಿಗೆಗಳಲ್ಲಿ ಆಯಾ ಪಾರ್ಟಿಯ, ಜಾತಿಯ ಬೆಂಬಲಿಗರು ಪಾಲ್ಗೊಳ್ಳುವುದು ಸಹಜ. ಮಂತ್ರಿಗಳು ಸತ್ತರೂ ಜನ ಸೇರಬಹುದು. ಸರಕಾರದಲ್ಲಿ ಯಾವುದೇ ಸ್ಥಾನವಿಲ್ಲದ ಒಬ್ಬ ವ್ಯಕ್ತಿ ನಿಧನರಾದಾಗ ದೇಶದಾದ್ಯಂತ ಲಕ್ಷಾವಧಿ ಜನ ಮ್ಲಾನವದನರಾಗಬೇಕಾದರೆ, ಪಶ್ಚಿಮ ಬಂಗಾಲದಲ್ಲಿ ಹೆಂಗಸರು, ಮಕ್ಕಳು, ಮುದುಕರನ್ನೊಳಗೊಂಡ ಲಕ್ಷಾವಧಿ ಜನಸ್ತೋಮ ಕಣ್ಣೀರನ್ನು ಸುರಿಸಬೇಕಾದರೆ, ಬಿಕ್ಕಿ ಬಿಕ್ಕಿ ಅಳಬೇಕಾದರೆ ಜನರಲ್ಲಿ ಆ ವ್ಯಕ್ತಿಯ ಪ್ರಭಾವ ಎಷ್ಟಿರಬೇಕು ? ಜನತೆಯ ಮಧ್ಯ ಅದೆಂಥ ದುಡಿತ ಅವರದಿರಬೇಕು ? ಸಹಸ್ರಾರು ಸಂಗಾತಿಗಳ ಹೃದಯಗಳಲ್ಲಿ ಎಂದಿಗೂ ಅಳಿಸಲಾಗದ ಸ್ಥಾನಗಳಿಸಿಕೊಂಡಿದ್ದರು ಕಾಂ| ಪ್ರಮೋದ್.

ನವೆಂಬರ್ 29 ರಂದು ಜನತಾ ಚೀನಾದ ಬೀಜಿಂಗ್‌ನಲ್ಲಿ ಹೃದಯಾಘಾತದಿಂದ ನಮ್ಮನ್ನಗಲಿದರು ಕಾಂ| ಪ್ರಮೋದ್ ದಾಸ್ ಗುಪ್ತಾ. ಸುಲಿಗೆ ರಹಿತ ಸಮಾಜ ಕಟ್ಟಲು, ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಸಿದ್ಧಾಂತವಾಗಿಟ್ಟುಕೊಂಡು ಪರಿಷ್ಕರಣವಾದದಿಂದಲೂ, ಸಂಕುಚಿತವಾದಿಗಳಿಂದಲೂ ಪಾರ್ಟಿಯನ್ನು ಉಳಿಸಿ, ಬೆಳೆಸಿ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜಕೀಯ ನಿಲುವೆಯನ್ನು ಅತ್ಯಂತ ನಿಷ್ಠೆಯಿಂದ ಕಾರ್ಯರೂಪದಲ್ಲಿ ತರುವುದರಲ್ಲಿ ಯಶಸ್ಸು ಪಡೆದ ಧೀಮಂತ ಕಾಂ| ಪ್ರಮೋದ್. ಪಕ್ಷದ ಧೋರಣೆಯ ಯಶಸ್ಸಿಗಾಗಿ ರೈತ-ಕಾರ್ಮಿಕರನ್ನು, ವಿದ್ಯಾರ್ಥಿ-ಯುವಜನರನ್ನೂ ಹೋರಾಟಗಳಲ್ಲಿ ತೊಡಗಿಸಿ, ಪಳಗಿಸಿ, ತ್ಯಾಗ ಬಲಿದಾನದ ಅನುಭವ ಉಣ್ಣಿಸಿ, ಕ್ರೂರ ದಬ್ಬಾಳಿಕೆಯ ಕಣದಲ್ಲಿ ಗೆಲ್ಲಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಿಷ್ಠಾವಂತ ಸೈನಿಕರನ್ನಾಗಿ ಮಾಡಿದವರು ಅವರು. ಜನರ, ಕಾರ್ಯಕರ್ತರ ಜೀವನದಲ್ಲಿ ಬೆರೆತು, ಅವರಲ್ಲೊಬ್ಬರಾಗಿ ಬೆಳೆದು ಬಂದ ಮುಖಂಡ ಕಾಂ| ಪ್ರಮೋದ್, ಕಾಲ ಕಾಲದಲ್ಲಿ ಪಾರ್ಟಿಯು ಎದುರಿಸುತ್ತಿದ್ದ ಗಂಭೀರ, ಅಪಾಯಕಾರಿ ಎಡರು-ತೊಡರುಗಳನ್ನು ಧೈರ್ಯದಿಂದ ಎದುರಿಸಿ, ಚಳವಳಿಯನ್ನು ಮುಂದಕ್ಕೊಯ್ಯಲು, ಬೆಳೆಸಲು, ಹಾಗೆಯೇ ಪ. ಬಂಗಾಲದಲ್ಲಿ ಸಿ.ಪಿ.ಐ. (ಎಂ)ನ್ನು ಏಕೈಕ ಪ್ರಥಮ ರಾಜಕೀಯ ಪಾರ್ಟಿಯನ್ನಾಗಿ ಮಾಡಲು, ಎಡರಂಗದ ಸರಕಾರ ಭದ್ರವಾಗುಳಿಯುವಂತೆ ಮಾರ್ಗದರ್ಶನ ನೀಡಿದವರು ಕಾಂ| ಪ್ರಮೋದ್, ಈ ಕಾರಣದಿಂದಲೇ ಕೃಷಿ ಕಾರ್ಮಿಕರು, ರೈತರು, ಕಾರ್ಮಿಕರು, ವಿದ್ಯಾರ್ಥಿ—ಯುವ ಜನತೆ, ಮಧ್ಯಮ ವರ್ಗದ ಜನತೆ ಪ್ರವಾಹದೋಪಾದಿಯಲ್ಲಿ ಪ್ರಮೋದ್‌ರ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಹಸುಗೂಸುಗಳನ್ನು ಹೊತ್ತುಕೊಂಡು ಬಡವರು-ಮಧ್ಯಮ ವರ್ಗದವರಷ್ಟೇ ಅಲ್ಲ, ಮೇಲ್ವರ್ಗದ ಕುಟುಂಬದವರೂ ಈ ವಿದಾಯ ಯಾತ್ರೆಯಲ್ಲಿ ಪಾಲ್ಗೊಳ್ಳಬೇಕಾದರೆ ಪ್ರಮೋದ್‌ರ ಕಾರ್ಯ ಪ್ರತಿಷ್ಠೆ ಎಷ್ಟು ವಿಶಾಲವಾಗಿದೆಂಬುದನ್ನು ತೋರಿಸುತ್ತದೆ.



ಕಾಂ| ಪ್ರಮೋದ್ ದಾಸ್ ಗುಪ್ತಾರವರ ಅಂತಿಮ ಯಾತ್ರೆಯಲ್ಲಿ ಕಲ್ಕತ್ತಾದ ಬೀದಿಗಳಲ್ಲಿ ಅಂತಿಮ ದರ್ಶನಕ್ಕೆ ನೆರೆದಿದ್ದ ಜನಸ್ತೋಮ.

ದಿನಾಂಕ 5—ರವಿವಾರ ಮುಂಜಾನೆ 9 ಘಂಟೆಗೆ ಸರಿಯಾಗಿ ಚೀನಾ ದೇಶದ ಭವ್ಯ ವಿಮಾನದಲ್ಲಿ ಪ್ರಮೋದರ ದೇಹವನ್ನು ಕಲ್ಕತ್ತಾಗೆ ತರಲಾಯಿತು. ಜೊತೆಯಲ್ಲಿ ಪಿ. ಬಿ. ಸದಸ್ಯ ಕಾಂ| ಬಸವಪುನ್ನಯ್ಯ ಮತ್ತು ಪ. ಬಂಗಾಲ ರಾಜ್ಯ ಸಮಿತಿ ಸದಸ್ಯ ಕಾಂ| ಬುದ್ಧದೇವ ಭಟ್ಟಾಚಾರ್ಯ ಮತ್ತು ಲೋಕಸಭಾ ಸದಸ್ಯ ಕಾಂ| ಸೋಮನಾಥ ಚಟರ್ಜಿಯವರಿದ್ದರು. ಸೀಲ್ ಮಾಡಿದ ಪೆಟ್ಟಿಗೆಯಲ್ಲಿ ಮೃತ ದೇಹವನ್ನಿಟ್ಟು, ಮೇಲೆ ಚೀನಾ ಕಮ್ಯೂನಿಸ್ಟ್ ಪಕ್ಷದ ಕೆಂಬಾವುಟ ಹೊದಿಸಲಾಗಿತ್ತು. ಪೆಟ್ಟಿಗೆಯನ್ನು ವಿಮಾನದಿಂದ ಕೆಳಗಿಳಿಸುತ್ತಿದ್ದಂತೆ ಕಾಂ| ಬುದ್ಧದೇವ್ ಅವರು, "ನಾನು ಪ್ರಮೋದ್ ದಾ ರನ್ನು ವಾಪಸ್ ತರಲಾಗಲಿಲ್ಲ" ಎಂದು ದುಃಖ ಭಾರದಿಂದ ಕುಸಿದುಬಿದ್ದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ| ಇ. ಎಂ. ಎಸ್. ನಂಬೂದಿರಿ ಪಾಡ್, ಜ್ಯೋತಿಬಸು ಮೊದಲಾದ ಮುಖಂಡರು ಪಾರ್ಥಿವ ಶರೀರದ ಪೆಟ್ಟಿಗೆಯನ್ನು ವಿಮಾನದಿಂದ ಹೊತ್ತು ತಂದರು. ಕಪ್ಪು ಪಟ್ಟಿ ಹೊಂದಿದ ಕೆಂಪು ಧ್ವಜ ಹಿಡಿದ 73 ಸ್ವಯಂ ಸೇವಕರು (ಕಾಂ| ಪ್ರಮೋದ್‌ರಿಗೆ ನಿಧನ ಕಾಲಕ್ಕೆ 73 ವರ್ಷವಾಗಿತ್ತು) ಕೆಂಪು ವಂದನೆ ಸಲ್ಲಿಸಿದರು. ಬೆಳಿಗ್ಗೆ 6 ಘಂಟೆಯಿಂದ ಮೈ ಕೊರೆಯುವ ಚಳಿಯಲ್ಲಿ ವಿಮಾನ ನಿಲ್ದಾಣದ ಹೊರಗಡೆ ಕಾಯುತ್ತಿದ್ದ ಸಹಸ್ರಾರು ಜನ "ಪ್ರಮೋದ್ ದಾ ಅಮರ್ ಹೈ" ಎಂದು ಘೋಷಣೆ ಕೂಗುತ್ತಿದ್ದರು. ವಿಮಾನ ನಿಲ್ದಾಣದಿಂದ ಅಲೀಮುದ್ದೀನ್ ರಸ್ತೆಯಲ್ಲಿರುವ ಪಕ್ಷದ ಕಚೇರಿಗೆ ಮೃತದೇಹವನ್ನು ತರಲಾಯಿತು. ಈ 27 ಕಿ. ಮಿ. ದೂರದುದ್ದಕ್ಕೂ ಸ್ವಯಂ ಸೇವಕರು ಅರ್ಧ ಬಗ್ಗಿಸಿದ ಕೆಂಬಾವುಟಗಳನ್ನು ಹಿಡಿದು ಕೆಂಪು ವಂದನೆ ಸಲ್ಲಿಸುತ್ತಿದ್ದರು. ಪಾರ್ಥಿವ ಶರೀರದ ದರ್ಶನಕ್ಕಾಗಿ ರಸ್ತೆಯ ಇಬ್ಬದಿಗಳಲ್ಲಿ ಜನ ಕಿಕ್ಕಿರಿದು ನೆರೆದಿತ್ತು. ಸ್ವಯಂ ಸೇವಕರು ಇಂಟರ್ ನ್ಯಾಷನಲ್ ಹಾಡುತ್ತಿದ್ದರು. 11 ಘಂಟೆಗೆ ಸರಿಯಾಗಿ ಪಾರ್ಥಿವ ಶರೀರವನ್ನು ಪಕ್ಷದ ಕಚೇರಿಗೆ ತಂದು ಸಾರ್ವಜನಿಕ ದರ್ಶನಕ್ಕೆ ತೆರೆದಿಡಲಾಯಿತು. ಪ್ರಮೋದ್‌ರ ದೇಹದ ಮೇಲೆ ಅವರ ಪ್ರೀತಿಯ ಕರಿಯ ಜಾಕೆಟ್ ಹಾಗೇ ಇತ್ತು. ಎಲ್ಲಾ ಪಿ. ಬಿ. ಸದಸ್ಯರು, ಕೇಂದ್ರ ಸಮಿತಿ ಸದಸ್ಯರು, ವಿವಿಧ ರಾಜ್ಯ ಘಟಕಗಳಿಂದ ಆಗಮಿಸಿದ ಪ್ರತಿನಿಧಿಗಳು, ಹಾಗೆಯೇ ಇತರ ರಾಜಕೀಯ ಪಕ್ಷಗಳ ಮುಖಂಡರು ಪುಷ್ಪ ಗುಚ್ಛ ಅರ್ಪಿಸಿ ಶ್ರದ್ಧಾಂಜಲಿ ಸಲ್ಲಿಸಿದರು. ನಂತರ ಸಾಲಾಗಿ ನಿಂತ ಜನಸ್ತೋಮ ಅಂತಿಮ ವಂದನೆ ಸಲ್ಲಿಸಲಾರಂಭಿಸಿತು. ಬೆಳಗ್ಗೆ 11 ಘಂಟೆಯಿಂದ ಮಧ್ಯಾಹ್ನ 2-30 ಘಂಟೆಯ ಅವಧಿಯೊಳಗೆ ಪ್ರತಿ ನಿಮಿಷಕ್ಕೆ ನೂರರಂತೆ ಶಿಸ್ತುಬದ್ಧವಾಗಿ ಜನತೆ ಶ್ರದ್ಧಾಂಜಲಿ ಸಲ್ಲಿಸಿತು. ಸಮಯಾಭಾವದಿಂದ ದರ್ಶನ ಲಭಿಸದೆ ಸಹಸ್ರಾರು ಜನ ಸ್ಮಶಾನಕ್ಕೆ ಧಾವಿಸಿತು.

73ನೇಯ ವಯಸ್ಸಿನಲ್ಲಿ ಕಾಂ| ಪ್ರಮೋದ್ ಅವರು ಕೊನೆಯುಸಿರನ್ನೆಳೆದುದರಿಂದ ಅದರ ಸಂಕೇತವಾಗಿ ಎರಡು ಸಾಲಿನಲ್ಲಿ 73 ಸ್ವಯಂ ಸೇವಕರು ಬಿಳಿ ಸಮವಸ್ತ್ರ ತೊಟ್ಟು, ಕರಿ ಪಟ್ಟಿಯ ಕೆಂಪು ಧ್ವಜಗಳನ್ನು ಅಡ್ಡ ಹಿಡಿದು ಕೆಂಪು ವಂದನೆ ಅರ್ಪಿಸುತ್ತಿದ್ದಂತೆ ಕಾಂ| ಇ. ಎಂ. ಎಸ್., ಬಿ.ಟಿ.ಆರ್. ಮುಂತಾದವರು ಪಾರ್ಥಿವ ಶರೀರದ ಪೆಟ್ಟಿಗೆಯನ್ನು ಹೊತ್ತು ಅಲಂಕೃತ ಲಾರಿಯ ಮೇಲಿಟ್ಟರು. ಅಲಿಮುದ್ದೀನ್ ರಸ್ತೆಯಿಂದ 'ಕೊಯರ್‌ತಲಾ' ವಿದ್ಯುತ್ ಚಿತಾಗಾರದ ವರೆಗಿನ 7 ಕಿ. ಮಿ. ದೂರ ಸಾಗಿದ ಈ ವಿದಾಯ ಯಾತ್ರೆಯಲ್ಲಿ ಸುಮಾರು 5 ಲಕ್ಷಕ್ಕೂ ಮಿಕ್ಕಿ ಜನ ಪಾಲ್ಗೊಂಡಿತ್ತು. ಪ್ರಮೋದ್‌ರಿಗೆ ಅತ್ಯಂತ ಪ್ರಿಯವಾದ ಶಿಸ್ತಿನಿಂದ ಈ ಮೆರವಣಿಗೆ ಸಾಗಿತು. ಲಕ್ಷಾಂತರ ಜನ ಪಾಲ್ಗೊಂಡ ಜನ ಸಮೂಹವನ್ನು ನಿಯಂತ್ರಿಸುವ ಹೊಣೆಯನ್ನು ಪಕ್ಷದ ಸ್ವಯಂ ಸೇವಕರು ಹೊತ್ತಿದ್ದು, ಕೈಬೆರಳೆಣಿಕೆಯಷ್ಟು ಮಾತ್ರ ಪೋಲಿಸರಿದ್ದರು. ಇಪ್ಟಾ (ಇಂಡಿಯನ್ ಪೀಪಲ್ಸ್ ಥೇಟರ್ ಅಸೋಸಿಯೇಶನ್)ದ ಕಲಾಕಾರರು ಇಂಟರ್ ನ್ಯಾಶನಲ್ ಹಾಡುತ್ತಿದ್ದರು. ಜನ ಸಮೂಹ ಗಂಭೀರ ಮೌನದಿಂದ ನಡೆಯಿತು. 7 ಕಿ.ಮಿ. ಉದ್ದಕ್ಕೂ ಜನ ಮಹಡಿಗಳ ಮೇಲೆ, ಗಿಡಮರಗಳ ಮೇಲೆ ಕಿಕ್ಕಿರಿದು ನೆರೆದಿತ್ತು. ದುಡಿಯುವ ಜನತೆಯ ನೂತನ ಸಮಾಜ ಕಟ್ಟಲು ತನ್ನ ಇಡೀ ಜೀವನವನ್ನೇ ಧಾರೆ ಎರೆದ ನೇತಾರನ ಕೊನೆಯ ದರ್ಶನಕ್ಕೆ ಈ ಜನ ಸಮೂಹ ತುದಿಗಾಲ ಮೇಲೆ ನಿಂತಿತ್ತು. ಮಾರ್ಕ್ಸ್‌ವಾದವೇ ತನ್ನ ಸ್ವಾರ್ಥ, ಸುಲಿಗೆ ರಹಿತ ಸಮಾಜ ನಿರ್ಮಾಣವೇ ತನ್ನ ಸ್ವಾರ್ಥ, ಕ್ರಾಂತಿಯೇ ತನ್ನ ಸ್ವಾರ್ಥವೆಂದು ತಿಳಿದು, ತನ್ನ ಜೀವಿತ ಅವಧಿಯಲ್ಲಿ ಹಲವಾರು ಕ್ಷೇತ್ರಗಳಲ್ಲಿ ಸಂಘಟನಾ ಕಾರ್ಯ ಕೈಗೊಂಡು, ಅತ್ಯಂತ ಸರಳ ಜೀವನ ನಡೆಸಿದ, ಶಿಸ್ತನ್ನೂ, ಸಂಘಟನಾ ನಿಯಮವನ್ನು ದುಡಿಯುವ ಜನತೆಗೆ ಕಲಿಸಿದ ಆ ಧೀಮಂತ ನಾಯಕನಿಗೆ ಪ. ಬಂಗಾಲದ ಜನತೆ ತೋರಿಸಿದ ಗೌರವ, ಭಕ್ತಿ ಶ್ರದ್ಧೆಯ ಶ್ರದ್ಧಾಂಜಲಿ ಅಪೂರ್ವವಾಗಿತ್ತು. 7 ಘಂಟೆಗೆ ಸರಿಯಾಗಿ ಶರೀರವನ್ನು ವಿದ್ಯುತ್ ಚಿತಾಗಾರದಲ್ಲಿಡಲಾಯಿತು. ಕಂಬನಿ ತುಂಬಿದ, ಗದ್ಗದ ಕಂಠಗಳಿಂದ "ಪ್ರಮೋದ್ ದಾ ಅಮರ ರಹೇ"

(8ನೇ ಪುಟ ನೋಡಿ)



ಸಂಗಾತಿಗಳ ಹೆಗಲ ಮೇಲೆ ಕಾಂ| ಪ್ರಮೋದ್‌ರ ಕೊನೆಯ ಪಯಣ.

ಎಡರಂಗ ಸರ್ಕಾರ—ಜನತೆ ಮತ್ತು ಸಾಮೂಹಿಕ ಚಳವಳಿಗಳ ಪಾತ್ರ

— ಜ್ಯೋತಿಬಸು

(ಕಳೆದ ಸಂಚಿಕೆಯಿಂದ)

ಉದ್ಯಮಗಳಲ್ಲಿ ಅಲ್ಪ ಸಂಖ್ಯಾತ ಕಾರ್ಮಿಕ ಸಂಘ ಬೇಜವಾಬ್ದಾರಿಯುತವಾಗಿ ಕೆಲಸ ಸ್ಥಗಿತಗೊಳಿಸುವುದು ಮತ್ತು ಮಿಂಚಿನ ಮುಷ್ಕರ ಹೂಡುವುದನ್ನು ಕಾರ್ಮಿಕರು ವಿರೋಧಿಸಿದ್ದಾರೆ. ಮುಂದೆಯೂ ಅಂತಹ ಸಂದರ್ಭಗಳು ಬರುತ್ತವೆ. ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಹಲವಾರು ಮಾರ್ಗಗಳಿದ್ದು ಜವಾಬ್ದಾರಿಯುತ ಸಂಘಟನೆ ಇವುಗಳನ್ನು ಅನುಸರಿಸಬೇಕು. ಪ್ರತೀಗಾಮಿ ಸಂಘಟನೆಗಳ ಇಂತಹ ಕ್ರಮಗಳನ್ನು ಬಹು ಸಂಖ್ಯಾತ ಕಾರ್ಮಿಕರು ವಿರೋಧಿಸಬೇಕು.

ಕೇಂದ್ರದ ಮನೋಭಾವ

ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಿ ಕೇಂದ್ರ ಸರ್ಕಾರದ ನೀತಿಯಿಂದಾಗಿ ವಿಷಮ ಪರಿಸ್ಥಿತಿ ಮುಂದುವರಿಯುತ್ತಿದೆ. ಆದರ ಪ್ರಜಾಪ್ರಭುತ್ವ ವಿರೋಧಿ ಮನೋಭಾವ ಕೆಲವು ಆಡಳಿತ ವರ್ಗಗಳಲ್ಲೂ ಕಂಡು ಬರುತ್ತಿದೆ. ಕಾರ್ಮಿಕರ ಹಿತಾಸಕ್ತಿಗೆ ಅನುಗುಣವಾಗಿ ನಾವು ಈ ಕ್ಷೇತ್ರಗಳಲ್ಲಿ ವಿಶ್ವಾಸಪೂರ್ಣವಾಗಿ ಪ್ರತಿಕ್ರಿಯಿಸಲು ಸಾಧ್ಯವಿಲ್ಲದಿದ್ದರೂ ನ್ಯಾಯ ದೊರಕುವಂತೆ ಆಡಳಿತವರ್ಗ ಮತ್ತು ಕೇಂದ್ರ ಸರ್ಕಾರಗಳೊಂದಿಗೆ ವ್ಯವಹರಿಸುತ್ತೇವೆ.

ಕೇಂದ್ರ ಸರ್ಕಾರದ ಪ್ರತೀಗಾಮಿ ಮತ್ತು ದಬ್ಬಾಳಿಕೆಯ ಕಾನೂನುಗಳನ್ನು ಉಪಯೋಗಿಸದಿರಲು ನಿರ್ಧರಿಸಿದ್ದೇವೆ. ವಿವಾದವನ್ನು ಬಗೆಹರಿಸುವಲ್ಲಿ ಸಂಘಟನೆಯ ಶಕ್ತಿ ಹಾಗೂ ಪ್ರಭಾವ ಸಹಾಯಕ್ಕೆ ಬರುತ್ತವೆ. ಕೆಲವು ಸಂದರ್ಭಗಳಲ್ಲಿ ಆಡಳಿತ ವರ್ಗಗಳೇ ಕಾರ್ಮಿಕರನ್ನು ಹೋರಾಟದ ಕಣಕ್ಕೆ ತಳ್ಳುತ್ತವೆ. ಖಾಸಗೀ ಕ್ಷೇತ್ರ ಕುರಿತಂತೆ ಸಂಘಟನೆಗಳು ಶಕ್ತಿಯುತವಾಗಿದ್ದರೆ ಎಡರಂಗ ಸರ್ಕಾರದ ಸಹಕಾರದೊಂದಿಗೆ ನ್ಯಾಯಯುತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು. ಒಂದು ಸಾರಿ ಇತ್ಯರ್ಥಕ್ಕೆ ಬಂದರೆ ಎರಡು ಕಡೆಯವರು ಉತ್ಪಾದನೆಗೆ ದಕ್ಕೆ ಬಾರದಂತೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು.

ಸರ್ಕಾರ ಕಾರ್ಮಿಕರೊಂದಿಗಿರುತ್ತದೆ

ಕೆಲವೊಮ್ಮೆ ವಿಶ್ವಾಸದ ಅಭಾವದಿಂದಾಗಿ ಮತ್ತು ಕೆಲವು ಆಡಳಿತ ವರ್ಗಗಳ ಕುಟಿಲ ನೀತಿಯಿಂದಾಗಿ ಸಮಸ್ಯೆಗಳು ತಲೆದೋರುತ್ತವೆ. ಮತ್ತು ಕಾರ್ಮಿಕರ ಕೆಲಸದ ಹೊರೆಯನ್ನು ಹೆಚ್ಚಿಸುವ ಯತ್ನಗಳಾಗುತ್ತಿವೆ, ಕಾಂಗ್ರೆಸ್ ಸಾರ್ವತ್ರಿಕವಾಗಿ ಆಡಳಿತ ವರ್ಗಗಳನ್ನು ಬೆಂಬಲಿಸುತ್ತಿದ್ದುದ್ದಕ್ಕೆ ಬದಲಾಗಿ ನ್ಯಾಯಯುತ ಹೋರಾಟಗಳಲ್ಲೆಲ್ಲ ನಮ್ಮ !ಸರ್ಕಾರ ಕಾರ್ಮಿಕರ ಬೆಂಬಲಕ್ಕಿದೆ ಎನ್ನುವುದನ್ನು ಕಾರ್ಮಿಕರು ಬಲ್ಲರು. ಬೇಡಿಕೆಗಳಿಗಾಗಿ ಹೋರಾಟದಲ್ಲಿದ್ದಾಗ ಮತ್ತು ಮುಷ್ಕರಗಳಲ್ಲಿ ತೊಡಗಿರುವಾಗಲೂ ಕಾರ್ಮಿಕರ ನಡವಳಿಕೆ ಮುಖ್ಯವಾಗುತ್ತದೆ ಮಾತುಕತೆ ನಡೆಸುವಾಗ ಬಿಗಿ ಧೋರಣೆ ಹೊಂದಿರಬೇಕಾದರೂ ಅನಗತ್ಯವಾದ ನಿಲುವು ತಳೆಯಬಾರದು.

ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಸಾಂಸ್ಕೃತಿಕ ಕಾರ್ಯಕರ್ತರು ತಮ್ಮ ಕ್ಷೇತ್ರವನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರ ತನ್ನ ಕಾರ್ಯಕ್ರಮ ಜಾರಿಗೊಳಿಸುವಲ್ಲಿ ಸಹಾಯ ನೀಡಬೇಕು. ಹಾಗಾದಾಗ ಜನ ಸಮೂಹವನ್ನು ನಮ್ಮೆಡೆ ಸೆಳೆಯಲು ಸಾಧ್ಯವಾಗುವುದಲ್ಲದೆ ನಮ್ಮ ವಿರೋಧಿಗಳನ್ನು ಜನರಿಂದ ಹೆಚ್ಚು ಹೆಚ್ಚು ದೂರವಿಡಬಹುದು. ಸರ್ಕಾರ ನಮ್ಮದಾಗಿದ್ದು, ಅಗತ್ಯವಿರುವೆಡೆಯಲ್ಲಿ ಸಾಧ್ಯವಿರುವ ಎಲ್ಲ ಸಹಾಯವನ್ನು ಸರ್ಕಾರ ಮತ್ತಿನ್ನಿತರ ಸಂಸ್ಥೆಗಳಿಂದ ಪುರಸಭೆ, ಪಂಚಾಯಿತಿ, ಸಹಕಾರ ಸಂಸ್ಥೆಗಳ ಮೂಲಕ ಜನತೆಗೆ ದೊರಕಿಸಿ ಜನತೆ ಮತ್ತು ಸರ್ಕಾರದ ನಡುವೆ ಜೀವಂತ ಸಂಭಂಧ ಹೆಣೆಯಬೇಕಾಗಿದೆ.

ಇದನ್ನು ಪರಿಷ್ಕರಣವಾದಿ ಕಾರ್ಯಕ್ರಮವೆಂದು ಪರಿಗಣಿಸಬಾರದು; ನಮ್ಮ ಗುರಿ ಇದರಲ್ಲೇ ಅಡಕವಾಗಿಲ್ಲ; ಇದು ಜನತೆಯ ವಿಶ್ವಾಸಗಳಿಸುವಲ್ಲಿನ ನಮ್ಮ ಕ್ರಾಂತಿಕಾರಿ ಹೊಣೆಯ ಒಂದು ಮುಖ ಮಾತ್ರ. ಈ ಚಟುವಟಿಕೆ ನಡೆಸುವಾಗ ನಮ್ಮ ಅಂತಿಮ ಗುರಿಯಾದ ಸಮಾಜದ ಕ್ರಾಂತಿಕಾರಿ ಬದಲಾವಣೆಯ ಬಗ್ಗೆ ಜನತೆಗೆ ಶಿಕ್ಷಣ ನೀಡುತ್ತಾ ಅವರ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸಬೇಕು

ಚಳವಳಿ ಮತ್ತು ಸಂಘರ್ಷ

ಎಡರಂಗ ಸರ್ಕಾರದಡಿಯಲ್ಲೂ ಆರ್ಥಿಕ ರಾಜಕೀಯ ಸಮಸ್ಯೆಗಳಿಗಾಗಿ ಮುಷ್ಕರಗಳು, ಬಂದ್‌ಗಳು ಚಳುವಳಿಗಳು ನಡೆಯುತ್ತವೆ. ಇವುಗಳ ಯಾಥಾರ್ಥತೆಯನ್ನು ಸರ್ಕಾರ ಒಪ್ಪಿಕೊಂಡಿದೆ ಅಲ್ಲದೆ ಜನ ವಿರೋಧಿ ಹಾಗೂ ಪ್ರತೀಗಾಮಿ ವಿಷಯಗಳಿಗೆ ಸಂಭಂದಿಸಿದಂತೆ ಮುಷ್ಕರಗಳು ಬಂದ್‌ಗಳು ನಡೆದಿವೆ. ಇಂತಹ ಸಂದರ್ಭಗಳಲ್ಲಿ ಬಲ ಪ್ರಯೋಗದಿಂದ ಇವುಗಳನ್ನು ಸರ್ಕಾರ ಹತ್ತಿಕ್ಕಲು ಪ್ರಯತ್ನಿಸಿಲ್ಲ. ತಮ್ಮ ವಿರೋಧ ವ್ಯಕ್ತಪಡಿಸಲು ಮುಷ್ಕರ, ಬಂದ್‌ಗಳನ್ನು ಸಂಘಟಿಸಲು ವಿರೋಧ ಶಕ್ತಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಲಾಗಿದೆ ಕೇವಲ ಹಿಂಸಾತ್ಮಕ ಹಾಗೂ ಭಯಾತ್ಪಾದಕ ಕಾರ್ಯತಂತ್ರಗಳನ್ನು ಮಾತ್ರ ಹತ್ತಿಕ್ಕಲು ಯತ್ನಿಸಲಾಗಿದೆ.

ಈಗಿನ ಆಡಳಿತ ವ್ಯವಸ್ಥೆಯಲ್ಲಿ ಕೇವಲ ಪ್ರಗತಿಪರ ಶಾಸನಗಳಿಂದ ನಿಶ್ಚಿತವಾದ ಫಲವನ್ನು ಪಡೆಯಲು ಸಾಧ್ಯವಿಲ್ಲವೆಂಬುದು ನಮ್ಮ ಅನುಭವವಾಗಿದೆ. ಆದ್ದರಿಂದ ಭೂ ಸುಧಾರಣೆ, ಹೆಚ್ಚುವರಿ ಭೂಮಿಯ ಹಂಚಿಕೆ, ಭಾಗರ್ದಾರರುಗಳಿಗೆ ಹಕ್ಕುಗಳ ನೀಡಿಕೆ, ಕನಿಷ್ಠ ಕೂಲಿ ಜಾರಿ, ಭೂರಹಿತ ಕಾರ್ಮಿಕರಿಗೆ ಶಾಸನ, ಪ್ರತೀಗಾಮಿ ಜೋತೆದಾರರ ಅಕ್ರಮ ಚಟುವಟಿಕೆಗಳ ನಿಷೇದ, ಬಡ್ಡಿ ಹಣ ವ್ಯವಹಾರಸ್ಥರು ಕಾಳಸಂತೆಕೋರರು ಮುಂತಾದವರನ್ನು ಎದುರಿಸಲು ದಕ್ಷತೆಯಿಂದೊಡಗೂಡಿದ ಪಂಚಾಯಿತಿಗಳ ರೈತರ, ಕೃಷಿ ಕಾರ್ಮಿಕ ಸಂಘಟನೆಗಳ ಸಕ್ರಿಯ ಬೆಂಬಲವಿಲ್ಲದೆ ಸಾಧ್ಯವಿಲ್ಲ. ಸಾಮೂಹಿಕ ಕ್ರಿಯೆಗಳ ಮೂಲಕ ನ್ಯಾಯಯುತ ಅಂಶಗಳಿಗಾಗಿ ಸರ್ಕಾರದ ಗಮನ ಸೆಳೆಯಬೇಕಲ್ಲದೆ ಅವುಗಳ ಜಾರಿಗೆ ಮುಷ್ಕರಗಳೂ ಅನಿವಾರ್ಯವಾಗಬಹುದು.

ಹಾಗೆಯೇ ಪ್ರತೀಗಾಮಿಗಳ, ಜಾತೀಯವಾದಿಗಳ ಛಿದ್ರಕಾರಿ ಚಟುವಟಿಕೆಗಳನ್ನು ಕಾರ್ಮಿಕರ, ರೈತರ, ಪರಿಶಿಷ್ಠ ಜಾತಿ ಬುಡಕಟ್ಟುಗಳ ಜನತೆಯ ಸಹಕಾರವಿಲ್ಲದೆ ಕೇವಲ ಆಡಳಿತ ವ್ಯವಸ್ಥೆ ಮತ್ತು ಪೋಲೀಸ್ ಮೂಲಕ ಹತ್ತಿಕ್ಕಲಾಗುವುದಿಲ್ಲ.

ಸಾಕಷ್ಟು ಪ್ರಮಾಣದಲ್ಲಿ ಬಂಡವಾಳ ಹೂಡದಿರುವುದು ಆಹಾರ, ಸಿಮೆಂಟ್ ಮತ್ತಿನ್ನಿತರ ಕಚ್ಚಾ ವಸ್ತುಗಳ ಪೂರೈಕೆಗೆ ಸಂಭಂದಿಸಿದಂತೆ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ವಿರುದ್ಧವೂ ಸಾಮೂಹಿಕ ಚಳುವಳಿಗಳು ಮತ್ತು ಹೋರಾಟಗಳು ಅಗತ್ಯವಾಗಿವೆ.

ವಿದ್ಯಾರ್ಥಿ ಮತ್ತು ಶಿಕ್ಷಕರು

ಎಡರಂಗ ಸರ್ಕಾರ ಶಿಕ್ಷಣ ನೀತಿಯ ವಿರುದ್ಧದ ಪ್ರತೀಗಾಮಿ ಶಕ್ತಿಗಳ ಪ್ರಹಾರವನ್ನು ಎದುರಿಸುವಲ್ಲಿ ಮತ್ತು ವಿದ್ಯಾಕ್ಷೇತ್ರದಲ್ಲಿ ತಂದಿರುವ ಮಹತ್ತರ ಬದಲಾವಣೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ವಿದ್ಯಾರ್ಥಿ, ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಅಂತೆಯೇ ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳನ್ನು ತೆಗೆದುಕೊಂಡು ಸೂಕ್ತ ಪರಿಹಾರವನ್ನು ದೊರಕಿಸಿಕೊಡಬೇಕಾಗಿದೆ. ವಿದ್ಯಾರ್ಥಿಗಳು ತಮ್ಮ ನಡವಳಿಕೆ ಮತ್ತು ಚಟುವಟಿಕೆಗಳ ಮೂಲಕ ಶಿಕ್ಷಕರು,ಪೋಷಕರು ಮತ್ತು ಜನತೆಯ ಬೆಂಬಲ, ಸಹಾನುಭೂತಿ ಪಡೆಯಬೇಕು.

ಹೇಗೆ ತಪ್ಪು ಹೆಜ್ಜೆಗಳಿಂದ ಪರಿಹಾರ ದೊರೆಯದೆ ನಮ್ಮ ಸರ್ಕಾರದ ಹಿತಾಸಕ್ತಿಗೆ ವಿರೋಧವಾಗಬಹುದೋ ಅಂತೆಯೇ ಕಾರ್ಮಿಕರ, ವಿದ್ಯಾರ್ಥಿಗಳ ಶಿಕ್ಷಕರ ನ್ಯಾಯಯುತ ಸಮಸ್ಯೆಗಳನ್ನು ತೆಗೆದುಕೊಳ್ಳದಿದ್ದರೆ ಪ್ರತೀಗಾಮಿ ಶಕ್ತಿಗಳು ದುರ್ಲಾಭ ಪಡೆಯಬಹುದು. ಅವರುಗಳನ್ನು ಹಾದಿ ತಪ್ಪಿಸಿ ರಾಜಕೀಯವಾಗಿ ನಮ್ಮ ವಿರುದ್ಧ ಅವರನ್ನು ಬಳಸಬಹುದಾಗಿದೆ. ಅವರ ಸಮಸ್ಯೆಗಳಿಗೆ ಪರಿಹಾರ ಸುಲಭವಲ್ಲದಿರಬಹುದು, ಧೀರ್ಘ ಸಮಯ ತೆಗೆದುಕೊಳ್ಳಬಹುದು,ಆದರೂ ಅವೆಲ್ಲವುಗಳಿಗೆ ಸರಿಯಾದ ಪರಿಹಾರ ನಮ್ಮ ನೇತೃತ್ವದಲ್ಲಿ ದೊರಕಬೇಕು.

ಆರ್ಥಿಕ ಬೇಡಿಕೆಗಳ ಇತ್ಯರ್ಥ ಮತ್ತು ವಿವಿಧ ಕ್ಷೇತ್ರಗಳಲ್ಲಿನ ಮುನ್ನಡೆಗಳು ಮುಖ್ಯವಾದರೂ ಕೇವಲ ಆರ್ಥಿಕ ಬೇಡಿಕೆಗಳಿಗಾಗಿನ ಹೋರಾಟಗಳು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ರಾಜಕೀಯ ಕ್ರೋಡಿಕರಣಕ್ಕೆ ನಾಂದಿಯಾಗುವುದಿಲ್ಲ. ಇದೊಂದು ಪ್ರತ್ಯೇಕ ಹಾಗೂ ನಿರಂತರವಾದ ಹೊಣೆಯಾಗಿದೆ. ಜನತೆಯ ಸರ್ಕಾರವಿರುವ ಹಾಗೂ ಪ್ರತೀಗಾಮಿಗಳ ಚಟುವಟಿಕೆ ಅಪಾಯಕಾರಿ ಹಾಗೂ ಪ್ರತೀಗಾಮಿಯಾಗಿರುವ ಪ್ರಸ್ತುತ ಸಂದರ್ಭದಲ್ಲಿ ಹಾದಿ ತಪ್ಪದಂತೆ ಜನತೆಗೆ ರಾಜಕೀಯ ತಿಳುವಳಿಕೆ ನೀಡುವುದು ಮೂಲಭೂತ ಹೊಣೆಯಾಗಿದೆ. ನಾವು ಪ್ರಯಾಣಿಸಬೇಕಾದ ಮಾರ್ಗ ಅತ್ಯಂತ ಕಷ್ಟಕರವೂ ಯಾತನಾಮಯವೂ ಆಗಿದೆ. ಆದರೆ ನಾವು ಅನುಸರಿಸುತ್ತಿರುವ ಸರಿಯಾದ ನೀತಿಗಳಿಂದ ಮತ್ತು ಜನತೆಯೊಂದಿಗಿನ ನಿರಂತರ ನಿಕಟ ಸಂಬಂಧಗಳಿಂದಾಗಿ ನಮ್ಮ ಯಶಸ್ಸು ಕಟ್ಟಿಟ್ಟದ್ದು.

●

ತ್ರಿಪುರಾ ಸರ್ಕಾರದ ಸಾಧನೆ

(3ನೇ ಪುಟದಿಂದ)

ಕಲ್ಕತ್ತದವರೆಗೆ ವಿಮಾನದಲ್ಲಿ ಕರೆದೊಯ್ದು ಅಲ್ಲಿಂದ ರೈಲಿನಲ್ಲಿ ರಾಂಚಿಗೆ ಕರೆದೊಯ್ದು ಅವರವರ ಹಳ್ಳಿಗಳಿಗೆ ಕಳುಹಿಸಿಕೊಡಲಾಯಿತು."

ಇದೇ ರೀತಿಯಲ್ಲಿ 113 ಜನ ಜೀತದಾಳುಗಳನ್ನು ವಿಮುಕ್ತಗೊಳಿಸಿ 1980 ರ ಏಪ್ರಿಲ್ 10 ಮತ್ತು 11 ರಂದು ರಾಂಚಿಗೆ ಕಳುಹಿಸಲಾಯಿತು. ಜೀತದಾಳುಗಳನ್ನು ದುಡಿಸಿಕೊಳ್ಳುತ್ತಿದ್ದ 'ಸರ್ದಾರ್'ಗಳನ್ನು ಬಂಧಿಸಿ ಅವರನ್ನು ಇಂಡಿಯನ್ ಪಿನಲ್‌ಕೋಡ್ ಮತ್ತು ಕಾರ್ಮಿಕ ಶಾಸನಗಳ ಅಡಿಯಲ್ಲಿ ವಿವಿಧ ಅಪರಾಧಗಳಿಗೋಸ್ಕರ ತನಿಖೆ ನಡೆಸಲಾಯಿತು. ಈ ಸಂಬಂಧವಾಗಿ ತ್ರಿಪುರಾ ಸರಕಾರ ಕೈಗೊಂಡ ಕ್ರಮಗಳನ್ನು ಕಮಿಷನರ್‌ರವರು ಅಭಿನಂದಿಸಿದರು.

ಬಿಹಾರ್, ಉತ್ತರ ಪ್ರದೇಶ, ಆಂಧ್ರ ಪ್ರದೇಶ, ಪಂಜಾಬ್ ಮತ್ತು ಕೇಂದ್ರಾಡಳಿತ ದೆಹಲಿ ಸರಕಾರಗಳ ಸೋಲಿಗೆ ಕಮಿಷನರ್‌ರವರು ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಈ ರಾಜ್ಯಗಳಲ್ಲಿ ಅತ್ಯಂತ ಅಮಾನವೀಯ ಪರಿಸ್ಥಿತಿಯಲ್ಲಿ ಜೀತ ಪದ್ಧತಿ ಜೀವಂತವಾಗಿದೆ. ವಿವಿಧ ಏಷ್ಯನ್ ಕ್ರೀಡಾ ಪ್ರಾಜೆಕ್ಟುಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಕುರಿತಾಗಿ ಸುಪ್ರಿಂ ಕೋರ್ಟ್ ನೀಡಿರುವ ತೀರ್ಪು, ಪ್ರಾಜೆಕ್ಟಿನ ಉಸ್ತುವಾರಿ ನೋಡಿಕೊಳ್ಳುತ್ತಿರುವ ದೇಹಲಿ ಆಡಳಿತವನ್ನು ಮತ್ತು ಕೇಂದ್ರ ಸರಕಾರವನ್ನು ತೀವ್ರತರ ಆಪಾದನೆಗಳಿಗೆ ಗುರಿಮಾಡಿದೆ. ಕಮಿಷನರ್‌ರವರ ಇನ್ನೂ ಕೆಲವು ಉದಾಹರಣೆಗಳನ್ನು ಕೊಟ್ಟು ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಬಿಡುಗಡೆಗೊಳಿಸಲ್ಪಟ್ಟ ಜೀತದಾಳುಗಳು ಮತ್ತೆ ಜೀತದಾಳುಗಳಾಗಿ ಬಿಡುತ್ತಿದ್ದಾರೆಂದೂ ಇದಕ್ಕೆ ಕಾರಣ, ಅವರುಗಳಿಗೆ ಸರಿಯಾದ ಪುನರ್ವಸತಿ ಕಾರ್ಯವನ್ನು ರಾಜ್ಯ ಸರಕಾರಗಳು ಮಾಡದೇ ಇರುವುದೇ ಕಾರಣವೆಂದು ಹೇಳಿದ್ದಾರೆ. ಈ ಉದಾಹರಣೆಗಳು ಭಾರತೀಯ ಅಂಕಿ ಅಂಶಗಳ ಸಂಸ್ಥೆ, ಭಾರತೀಯ ಸಾರ್ವಜನಿಕ ಆಡಳಿತಸಂಸ್ಥೆ ಮುಂತಾದ ಸಂಸ್ಥೆಗಳು ನಡೆಸಿದ ಸಮೀಕ್ಷಾ ವರದಿಯನ್ನು ಆಧರಿಸಿವೆ.

ಜೀತ ಪದ್ಧತಿಯ ಸಮಸ್ಯೆಯನ್ನು ಪರಿಹರಿಸಲು ಕಾಂಗ್ರೆಸ್(ಐ) ಆಡಳಿತದ ರಾಜ್ಯ ಸರಕಾರಗಳು ಹೇಗೆ ವಿಫಲಗೊಂಡಿವೆ ಎಂಬುದನ್ನು ಈ ಸಮೀಕ್ಷೆಗಳು ತಿಳಿಸುತ್ತವೆ. ವಿವಿಧ ಸಂಸ್ಥೆಗಳು ನಡೆಸಿದ ಸಮೀಕ್ಷೆಗಳಲ್ಲದೆ, ಜೀತದಾಳುಗಳ ಮೇಲೆ ನಡೆಯುತ್ತಿರುವ ದಬ್ಬಾಳಿಕೆ, ಶೋಷಣೆಯ ಕುರಿತಾದ ಪತ್ರಿಕಾ ವರದಿಗಳನ್ನು ನಾವು ಆಗಾಗ ಪಡೆಯುತ್ತಿರುತ್ತೇವೆ. ಸುದ್ದಿ ಪತ್ರಿಕೆಗಳಲ್ಲಿ ಜೀತ ಪದ್ಧತಿಯ ಕುರಿತಾದ ಸುದ್ದಿಗಳು ಪ್ರಕಟಗೊಳ್ಳುವುದನ್ನು ತಡೆಹಿಡಿಯಲು ಬಿಹಾರ ಸರ್ಕಾರ ಪತ್ರಿಕಾ ವಿರೋಧಿ ಮಸೂದೆಯನ್ನು ಜ್ಯಾರಿಮಾಡುವಂಥ ಅಡ್ಡ ಮಾರ್ಗ ಹಿಡಿದಿದೆ. ಆದರೆ ಭ್ರಮೆಯನ್ನು ನಿರ್ಮಿಸುವುದರ ಮೂಲಕವಾಗಲೀ ಅಥವಾ ವಾಸ್ತವಿಕ ವರದಿಗಳನ್ನು ದಮನ ಮಾಡುವುದರಿಂದ ಆಗಲೀ ಸತ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲ.

○

ಸಂತಾಪ ಸಂದೇಶಗಳು

[29-11-82 ರಂದು ಬೀಜಿಂಗ್‌ನಲ್ಲಿ ನಿಧನರಾದ ಕಾಂ। ಪ್ರಮೋದ್ ದಾಸ್ ಗುಪ್ತರವರ ನಿಧನಕ್ಕೆ ಸಂತಾಪ ಸೂಚಿಸಿ ವಿವಿಧ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಕಳುಹಿಸಿದ ಸಂದೇಶಗಳಲ್ಲಿ ಕೆಲವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ]

ಚೀನಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಅಂತರ ರಾಷ್ಟ್ರೀಯ ಇಲಾಖೆಯಿಂದ ಬಂದಿರುವ ಸಂದೇಶ ಹೀಗಿದೆ :

ನವೆಂಬರ್ 29 ರಂದು ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತ ರವರ ಸ್ಥಿತಿ ವಿಷಮಿಸಿತು. ನಮ್ಮ ಆಸ್ಪತ್ರೆಯು ಅವರನ್ನು ಉಳಿಸಿ ಕೊಳ್ಳಲು ಎಲ್ಲಾ ಅವಶ್ಯಕ ಏರ್ಪಾಟುಗಳನ್ನು ಮಾಡಿತ್ತು. ಆದರೆ ಅವು ಯಾವುವೂ ಫಲಕಾರಿಯಾಗಲಿಲ್ಲ 13.45 ಘಂಟೆಗೆ (ಪೀಕಿಂಗ್ ಕಾಲ ಮಾನ) ಮೃತರಾದರು (ಭಾರತೀಯ ಕಾಲಮಾನ 11-15 ಘಂಟೆ)

ಅವರು ಮರಣ ಹೊಂದುವ ಸಮಯದಲ್ಲಿ ಮಾಜೀ ಉಪಮಂತ್ರಿ, ಚೀನಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಅಂತರ ರಾಷ್ಟ್ರೀಯ ಇಲಾಖೆಯ ಮುಖ್ಯಸ್ಥರೂ ಆಗಿರುವ ಕಾಂ। ಜಾಂಗ್ ಸಿಯಾಂಗ್ ಸಾನ್, ಸಿ.ಪಿ.ಐ. (ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ। ಎಂ. ಬಸವಪುನ್ನಯ್ಯ ಮತ್ತು ಪಶ್ಚಿಮ ಬಂಗಾಳ ಸಿ. ಪಿ. ಐ. (ಎಂ) ಕಾರ್ಯಕಾರೀ ಸಮಿತಿ ಸದಸ್ಯ ಕಾಂ। ಬುದ್ಧದೇವ್ ಭಟ್ಟಾಚಾರ್ಯ ಮುಂತಾದವರು ಅವರ ಹಾಸಿಗೆಯ ಬಳಿಯಲ್ಲಿದ್ದರು.

ಕಾಂ। ಪ್ರಮೋದ್ ದಾಸ್ ಗುಪ್ತ ಅವರು ಸಿ. ಪಿ. ಐ. (ಎಂ) ನ ಪ್ರಮುಖ ನಾಯಕರಾಗಿದ್ದರು. ಮತ್ತು ತಮ್ಮ ಇಡೀ ಬದುಕನ್ನು ಭಾರತ ದಲ್ಲಿ ಸಮತಾವಾದವನ್ನು ಬೆಳೆಸುವುದಕ್ಕಾಗಿ ಸಮರ್ಪಿಸಿದ್ದರು. ಇವರ ಸಾವು ಸಿ. ಪಿ. ಐ. (ಎಂ) ಮತ್ತು ಕಮ್ಯುನಿಸ್ಟ್ ಚಳವಳಿಗೆ ಆಗಿರುವ ದೊಡ್ಡ ನಷ್ಟವಾಗಿದೆ.

ಚೀನಾ ಜನತೆಯ ಮಿತ್ರನಾಗಿದ್ದ ಮತ್ತು ಸಮತಾವಾದಕ್ಕಾಗಿ ಇಡೀ ಬದುಕನ್ನು ಸಮರ್ಪಿಸಿದ್ದ ಕಾಂ। ಪ್ರಮೋದ್ ದಾಸ್ ಗುಪ್ತರವರ ನಿಧನಕ್ಕೆ ನಾವು ನಮ್ಮ ಆಳವಾದ ಶೋಕವನ್ನು ವ್ಯಕ್ತಪಡಿಸುತ್ತೇವೆ.

ಕಾಂ। ಪ್ರಮೋದ್ ದಾಸ್ ಗುಪ್ತ ಅವರ ಕುಟುಂಬಕ್ಕೆ ನಮ್ಮ ಸಹಾನುಭೂತಿಯನ್ನು ತಿಳಿಸಬೇಕೆಂದು ಸಿ. ಪಿ. ಐ. (ಎಂ) ನ ಕೇಂದ್ರ ಸಮಿತಿಯನ್ನು ನಾವು ವಿನಂತಿಸುತ್ತೇವೆ.

○

ಭಾರತದಲ್ಲಿರುವ ಸೋವಿಯೆತ್ ರಾಯಭಾರಿ

ನವದೆಹಲಿ, ನವೆಂಬರ್ 30, 1982

ಕಾಮ್ರೇಡ್ಸ್,

ಭಾರತದ ಕಮ್ಯುನಿಸ್ಟ್ ಚಳವಳಿಯ ಪ್ರಮುಖ ಮುಖಂಡ, ಸಿ.ಪಿ.ಐ. (ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ। ಪ್ರಮೋದ್ ದಾಸ್ ಗುಪ್ತಾರವರ ನಿಧನ ನಮಗೆ ಆಘಾತವನ್ನುಂಟುಮಾಡಿದೆ.

ಕಾಂ। ಪ್ರಮೋದ್ ದಾಸ್ ಗುಪ್ತ ಅವರು ಭಾರತದ ದುಡಿಯುವ ಜನರ ಹಿತಕ್ಕಾಗಿ, ಅವರ ಪ್ರಜಾಸತ್ತಾತ್ಮಕ ಹಕ್ಕು ಹಾಗೂ ವಿಮೋಚನೆಗಾಗಿ ಅವಿಶ್ರಾಂತವಾಗಿ ದುಡಿಯುತ್ತಿದ್ದರು.

ಕಾಂ। ಗುಪ್ತರವರ ದುಃಖತಪ್ತ ಕುಟುಂಬಕ್ಕೆ ನಮ್ಮ ಸಹಾನುಭೂತಿಯನ್ನು ದಯವಿಟ್ಟು ತಿಳಿಸಿ.

ನಿಮ್ಮ ವಿಶ್ವಾಸಿ

ಸಹಿ

ಯೂರಿ ಎಂ. ವೊರೊಂಟ್ಸೊವ್

●

ವಿಯೆಟ್ನಾಂ ಸಮಾಜವಾದಿ ಗಣರಾಜ್ಯದ ರಾಯಭಾರಿ

ನವದೆಹಲಿ, ನವೆಂಬರ್ 30, 1982

ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತರವರ ಅನಿರೀಕ್ಷಿತ ಮರಣ ದಿಂದ ನಾವು ಆಳವಾದ ಶೋಕಕ್ಕೆ ಒಳಗಾಗಿದ್ದೇವೆ. ಇದರಿಂದ ನಿಮ್ಮ ಪಕ್ಷ ಓರ್ವ ಒಳ್ಳೆಯ ನಾಯಕನನ್ನು ಮತ್ತು ನಮ್ಮ ಜನತೆ ಓರ್ವ ಒಳ್ಳೆಯ ಗೆಳೆಯನನ್ನು ಕಳೆದುಕೊಂಡಿದೆ.

ಈ ದುಃಖದ ಸಂಧರ್ಭದಲ್ಲಿ ನಿಮ್ಮ ಪಕ್ಷಕ್ಕೂ ಮತ್ತು ಗುಪ್ತರವರ ಕುಟುಂಬ ವರ್ಗಕ್ಕೂ ನಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತೇವೆ.

ನಿಮ ವಿಶ್ವಾಸಿ

ಸಹಿ/— ಗುಯೆನ್ ಕ್ವಾಂಗ್ ಟೋ

○


ಲಾವೋ ಜನತಾ ಗಣರಾಜ್ಯದ ರಾಯಭಾರಿ

ನವದೆಹಲಿ, ನವವೆಂಬರ್ 30, 1982

ಕಾಮ್ರೇಡ್ ಇ. ಎಂ. ಎಸ್. ನಂಬೂದಿರಿಪಾಡ್
ಪ್ರಧಾನ ಕಾರ್ಯದರ್ಶಿ
ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕಿಸ್ಟ್),
14, ಅಶೋಕ ರೋಡ್, ನವದೆಹಲಿ-110001.

ಕಾಮ್ರೇಡ್,

ಸಿ.ಪಿ.ಐ. (ಎಂ) ನ ಪೊಲಿಟ್‌ಬ್ಯೂರೋ ಸದಸ್ಯ, ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ। ಪ್ರಮೋದ್ ದಾಸ್ ಗುಪ್ತ ಅವರು ನಿನ್ನೆ ಅನಿರೀಕ್ಷಿತವಾಗಿ ಬೀಜಿಂಗ್‌ನಲ್ಲಿ ನಿಧನರಾದ ದುಃಖಕರ ವಾರ್ತೆ ತಿಳಿಯಿತು.



ದಿವಂಗತ ದಾಸ್ ಗುಪ್ತರವರು ನಮ್ಮ ನಾಯಕರ ಮತ್ತು ಜನತೆಯ ನೆನಪಿನಲ್ಲಿ ಚಿರವಾಗಿ ಉಳಿದಿದ್ದಾರೆ. ಕಳೆದ ಬಾರಿ ಅವರು ಕಾಮ್ರೇಡ್ ಸುರ್ಜೀತರೊಂದಿಗೆ ಲಾವೋ ಜನತಾ ಗಣರಾಜ್ಯಕ್ಕೆ ನೀಡಿದ ಭೇಟಿಯು ಲಾವೋ ಪೀಪಲ್ಸ್ ರೆವಲ್ಯೂಷನರಿ ಪಾರ್ಟಿ ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್) ನಡುವೆ ಸಂಬಂಧ ಬಲಗೊಳ್ಳಲು ತನ್ನ ಕಾಣಿಕೆಯನ್ನು ಸಲ್ಲಿಸಿದೆ.

ಇವರ ಸಾವಿನಿಂದಾಗಿ ಸಿ. ಪಿ. ಐ. (ಎಂ) ಮತ್ತು ಜಾಗತಿಕ ಕಮ್ಯುನಿಸ್ಟ್ ಚಳುವಳಿಯು ಓರ್ವ ಧೀರ ಹೋರಾಟಗಾರನನ್ನು ಕಳೆದುಕೊಂಡಿದೆ. ನಮ್ಮ ರಾಯಭಾರ ಕಚೇರಿಯ ಸಂಗಾತಿಗಳ ಪರವಾಗಿ ಮತ್ತು ನನ್ನ ಪರವಾಗಿ ಕಾಂ॥ ಗುಪ್ತರವರ ಸಾವಿನಿಂದ ಉಂಟಾಗಿರುವ ಸರಿಪಡಿಸಲಾಗದ ನಷ್ಟಕ್ಕೆ ನನ್ನ ಅತೀವ ಶೋಕವನ್ನು ವ್ಯಕ್ತಪಡಿಸುತ್ತಿದ್ದೇನೆ.

ನಿಮ್ಮ ಸಂಗಾತಿ

ಸಹಿ

ಡಾ॥ ಕೈತೊಂಗ್ ವಾಂಗ್‌ಸೆ

ಲಾವೋ ಜನತಾ ಗಣರಾಜ್ಯದ ರಾಯಭಾರಿ

○

ಟೆಲಿಗ್ರಾಂ

ಕಾಂ। ಇ. ಎಂ. ಎಸ್. ನಂಬೂದಿರಿ ಪಾಡ್. ಪ್ರಧಾನ ಕಾರ್ಯದರ್ಶಿ
ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್)
4, ಅಶೋಕ ರೋಡ್, ನವದೆಹಲಿ, ಇಂಡಿಯಾ

ಓರ್ವ ಮಹಾನ್ ಕಮ್ಯುನಿಸ್ಟ್ ನಾಯಕ ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತರವರ ಅನಿರೀಕ್ಷಿತ ಸಾವಿನಿಂದ ನಮಗೆ ಆಘಾತವಾತವೆ. ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ನೀಡಿದ ಬೆಂಬಲ ಸ್ಮರಣೀಯ. ನನ್ನ ಪರವಾಗಿ ಮತ್ತು ಕೇಂದ್ರ ಸಮಿತಿಯ ಪರವಾಗಿ ಸಂತಾಪವನ್ನು ಸ್ವೀಕರಿಸಿ.

ಹೈದರ್ ಅಕ್ಬರ್ ಖಾನ್ ರಾನೋ, ಪ್ರಧಾನ ಕಾರ್ಯದರ್ಶಿ,
ವರ್ಕರ್ಸ್ ಪಾರ್ಟಿ ಆಫ್ ಬಾಂಗ್ಲಾ ದೇಶ್

ಮೈಸೂರು :

ಜಿಲ್ಲಾ ರಾಜಕೀಯ ಸಮ್ಮೇಳನ

28-11-82 ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಜಿಲ್ಲಾ ರಾಜಕೀಯ ಸಮ್ಮೇಳನ ನಡೆಯಿತು.

ಸಮ್ಮೇಳನವು, ಜನವರಿ 5 ರಂದು ನಡೆಯಲಿರುವ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಯನ್ನು ಸೋಲಿಸಲು ಶ್ರಮಿಸಬೇಕೆಂದು ತೀರ್ಮಾನಿಸಿತು.

ಸಮ್ಮೇಳನವನ್ನು ಉದ್ಘಾಟಿಸಿದ ಪಕ್ಷದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕಾಂ। ಸೂರ್ಯನಾರಾಯಣರಾವ್ ಅವರು ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು. ಕಾಂ। ಸೂರಿಯವರು ಮಾತನಾಡುತ್ತಾ, ರೈತ ಕಾರ್ಮಿಕರ ಐಕ್ಯತೆಗೆ ಧಕ್ಕೆ ತರುವಂಥಾ ಶಕ್ತಿಗಳ ವಿರುದ್ಧ ಅನವರತ ಹೋರಾಟ ನಡೆಸಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ। ಪಿ. ರಾಮಚಂದ್ರರಾವ್ ಅವರು ಮಾತನಾಡುತ್ತಾ, ಈಗ ಅಧಿಕಾರದಲ್ಲಿರುವ ಭೂಮಾಲಿಕ-ಬಂಡವಾಳಶಾಹಿಗಳ ಪ್ರತಿನಿಧಿಗಳು ದೇಶದ ಯಾವ ಸಮಸ್ಯೆಗೂ ಪರಿಹಾರ ದೊರಕಿಸಲಸಮರ್ಥರು ಎಂಬುದನ್ನು ಜನತೆಗೆ ಮನವರಿಕೆ ಮಾಡಲು ಶ್ರಮಿಸಬೇಕೆಂದು ತಿಳಿಸಿದರು. ಜನತೆಯಲ್ಲಿ ಸಾಮಾಜಿಕ ಪ್ರಜ್ಞೆ ಬೆಳೆಸಿ, ಬೆಳೆದು ಬರುತ್ತಿರುವ ಹೋರಾಟಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ। ಎಂ. ಎನ್. ಉಗ್ರಪ್ಪನವರು ಮಾತನಾಡುತ್ತಾ ಸಂಘಟನೆಯನ್ನು ಬಲಪಡಿಸುವಂತೆ ಕರೆ ನೀಡಿದರು. ಪ್ರಜಾಸತ್ತೆಯನ್ನು ಗಂಡಾಂತರಕ್ಕೆ ಸಿಲುಕಿಸಿರುವ ಕಾಂಗ್ರೆಸ್ ವಿರುದ್ಧ ಜನರನ್ನು ಸಂಘಟಿಸುವಂತೆ ತಿಳಿಸಿದರು.

ಜಿಲ್ಲಾ ಸಮಿತಿಯ ಸದಸ್ಯ ಕಾಂ॥ ಮೋಹನ್ ಕುಮಾರ್ ಅವರು ಆರಂಭದಲ್ಲಿ ಸ್ವಾಗತಿಸಿದರು. ಸಮ್ಮೇಳನಕ್ಕೆ ಜಿಲ್ಲೆಯ ಹಲವಾರು ಪ್ರದೇಶಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು.

ಕೋಲಾರ :

ಜಿಲ್ಲಾ ಸಮಿತಿಯ ಸಭೆ

ನವೆಂಬರ್ 11 ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯ ಸಭೆ ಕೋಲಾರದಲ್ಲಿ ಸೇರಿತ್ತು.

ಪಕ್ಷದ ಜಿಲ್ಲಾ ಸಮಿತಿಗೆ ಕಾಂ। ಲಕ್ಷ್ಮಣರೆಡ್ಡಿಯವರನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ। ಪಿ. ರಾಮಚಂದ್ರರಾವ್, ಕಾಂ। ಸೂರ್ಯನಾರಾಯಣರಾವ್ ಮತ್ತು ಕಾಂ। ಸಿ. ನಂಜುಂಡಪ್ಪ ಅವರುಗಳು ಪಾಲ್ಗೊಂಡಿದ್ದರು.

ಚುನಾವಣೆಯಲ್ಲಿ ಐಕ್ಯ ಹೋರಾಟದ ನಿರ್ಧಾರ

(1ನೇ ಪುಟದಿಂದ)

ಮೂಡಿಕೊಟ್ಟಿವೆ ಎಂಬುದು ಹರ್ಷದಾಯಕ ಸಂಗತಿ.

ರಾಜ್ಯದ ಚುನಾವಣೆಯಲ್ಲಿ ಈ ರೀತಿ ಉಂಟಾಗಿರುವ ಒಳ್ಳೆಯ ಅವಕಾಶವನ್ನು ಸರಿಯಾಗಿ ಸದುಪಯೋಗಮಾಡಿಕೊಳ್ಳುವ ಜವಾಬ್ದಾರಿ ಈಗ ಮತದಾರರದ್ದು.

ನೇರ ಸ್ಪರ್ಧೆಗೆ ಅವಕಾಶಮಾಡಿಕೊಡಬೇಕೆಂಬುದು ಜನಸ್ತೋಮದ ಬೇಡಿಕೆಯಾಗಿತ್ತು. ಹೆಚ್ಚಿನಂಶ ಇದು ಸಾಧಿಸಿರುವುದರಿಂದ ಸರ್ವಾಧಿಕಾರ ಹಿಮ್ಮೆಟ್ಟಬೇಕು, ಪ್ರಜಾಪ್ರಭುತ್ವ ಉಳಿಯಬೇಕು, ಜಾತೀಯತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇಲ್ಲದಂತಾಗಬೇಕು, ಪೋಲೀಸರ ಗೋಳಿಬಾರು, ಮಹಿಳೆಯರ ಮಾನಭಂಗ, ಹಿಂದುಳಿದವರ-ದಲಿತರ ಮೇಲಿನ ದೌರ್ಜನ್ಯ ಕೊನೆಗೊಳ್ಳಬೇಕು, ರೈತರ, ಕಾರ್ಮಿಕರ, ವಿದ್ಯಾರ್ಥಿ-ಯುವಜನರ ನ್ಯಾಯವ್ದ ಬೇಡಿಕೆಗಳೆಲ್ಲ ಈಡೇರಬೇಕೆಂದು ಇಚ್ಛಿಸುವ ಮತದಾರರು ತಮ್ಮ, ತಮ್ಮ ಗೆಳೆಯರ, ನೆರೆಹೊರೆಯವರ ಮತಗಳನ್ನೆಲ್ಲ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸ್ಪರ್ಧಿಸುವ ಕಡೆಗಳಲ್ಲೆಲ್ಲ ಆ ಪಾರ್ಟಿಗೂ, ಇತರೆಡೆಗಳಲ್ಲಿ ಜನತಾ, ಕ್ರಾಂತಿರಂಗ, ಸಿ.ಪಿ.ಐ. ಹಾಗೂ ಸಿ.ಪಿ.ಐ. (ಎಂ) ಬೆಂಬಲಿತ ಉಮೇದ್ವಾರರಿಗೆ ಅನುಕೂಲ್ಯವಾದ ಮತಕೊಟ್ಟು ಆರಿಸಿ ತರುವ ಜವಾಬ್ದಾರಿ ಹೊರುತ್ತಾರೆಂದು ಅಪೇಕ್ಷಿಸುತ್ತೇವೆ.

ಪರಿಸರ

● ಒಂದು ಹಂತದಲ್ಲಿ ತುಂಬ ಯಶಸ್ವಿ ಎನಿಸಿಕೊಂಡ ರೈತರ ಸಂಘಟನೆ ಚುನಾವಣೆಯನ್ನು ಎದುರಿಸಬೇಕಾಗಿರುವ ಸನ್ನಿವೇಶದಲ್ಲಿ ತಳೆದಿರುವ ನಿಲುವು ತೀರ ನಕಾರಾತ್ಮಕ. ಚುನಾವಣೆಯಲ್ಲಿ ಯಾರನ್ನೂ ಬೆಂಬಲಿಸದ—ವಿರೋಧಿಸದ ಅದರ ತೀರ್ಮಾನ ಸರಿ. ರೈತರಿಗೆ ಯಾವುದೇ ಪಕ್ಷವನ್ನು ಶಿಫಾರ್ಸು ಮಾಡಲೂ ಸಂಘ ನಿರಾಕರಿಸಿದೆ. ಇದು ತರ್ಕ ಸಮ್ಮತ.

ಆದರೆ ರೈತರಿಗೆ "ಮತದಾನದ ಸ್ವಾತಂತ್ರ್ಯ"ಕ್ಕೆ ಅವಕಾಶ ಕೊಟ್ಟಿರುವ ರೈತ ಸಂಘ, ಪ್ರಚಾರಕ್ಕೆ ಇಳಿಯುವುದನ್ನು ನಿಷೇಧಿಸಿದೆ. ರೈತರ ಸಂಘದ ಕಟ್ಟಳೆ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಂವಿಧಾನ ದತ್ತವಾದ ಅಧಿಕಾರಕ್ಕೂ ಮೀರಿದ್ದೆಂಬ ಭಾವನೆ ರೈತ ನಾಯಕರನ್ನು ಆವರಿಸಿಕೊಂಡಿರುವುದು ದುರದೃಷ್ಟಕರ. ಮತದಾನದ ಸ್ವಾತಂತ್ರ್ಯವನ್ನು 30 ವರ್ಷದ ಜನತಂತ್ರ ಕಂಡ ಮೇಲೆ ನೀಡುವ ಇಲ್ಲವೇ ನಿರಾಕರಿಸುವ ಅಧಿಕಾರ ತನಗಿದೆಯೆಂದು ಈ ಸಂಘ ಭಾವಿಸಿದ್ದು ಅವಿವೇಕ.

ಜತೆಗೆ—ರೈತ ಸಂಘದವರು ಯಾರಾದರೂ ಸ್ಪರ್ಧಿಸಿದರೆ ಅಂತಹವರನ್ನು ಸಂಘದಿಂದ ಹೊರ ಹಾಕುವುದಲ್ಲದೆ, ಅಂಥವರ ವಿರುದ್ಧ ಕೆಲಸ ಮಾಡಿ ಸೋಲಿಸಲೂ ತೀರ್ಮಾನಿಸಿದ್ದು ಸ್ಪಷ್ಟ ವಿರೋಧಾಭಾಸ. ತಾನು ಇಳಿಯುತ್ತಿರುವ ಆಳದ ಅರಿವು ಇಲ್ಲದೆ ಮಾಡಿದ ತೀರ್ಮಾನ. ಇದರ ಪ್ರತಿಕ್ರಿಯೆ ಬಳ್ಳಾರಿಯಿಂದ ಈಗಾಗಲೇ ವ್ಯಕ್ತವಾಗಿದೆ. ಶಿವಮೊಗ್ಗದ ಹೊನ್ನಾಳಿಯಲ್ಲೂ ಇದು ಕಾಣಿಸಿಕೊಳ್ಳಲಿದೆ. ರೈತ ನಾಯಕರ ಈ ಸಮರ ವಿರೋಧಿ ತಂತ್ರ, ಈಗಾಗಲೇ ಒಡಕಿನ ಹಾದಿಯಲ್ಲಿರುವ ರೈತರ ಸಂಘದಲ್ಲಿ ಬಿರುಕನ್ನು ದೊಡ್ಡದು ಮಾಡಿದೆ.

ತನ್ನ ಮೂಗಿನ ನೇರಕ್ಕೆ ನಡೆಯಲಿಲ್ಲವೆಂದು ಒಂದು ಗ್ರಾಮವನ್ನೇ ಬಹಿಷ್ಕಾರಕ್ಕೆ ಈಡುಮಾಡಿರುವ ರೈತ ಸಂಘದ ನಾಯಕತ್ವ ಕಬ್ಬು ಬೆಳೆಗಾರರಿಗೆ ಒದಗಬಹುದಾದ 238 ರೂ.ಗಳ ದರವನ್ನು 201 ರೂ.ಗಳಿಗೆ ತಗ್ಗಿಸಿದೆ. ಕಬ್ಬಿನ ಹತಾಶ ಮಾರಾಟದ ಸ್ಥಿತಿಗೆ ದೂಡಿ ತನ್ನ ನಾಯಕತ್ವಕ್ಕೆ ಸಂಚಕಾರ ತಂದುಕೊಂಡಿದೆ.

ಈ ಹಿನ್ನೆಲೆಯಲ್ಲಿ ರೈತ ಸಂಘ, ಚುನಾವಣೆಯ ಮೇಲೆ ಬೀರಬಹುದಾದ ಪ್ರಭಾವ ಅತ್ಯಲ್ಪ. ತನ್ನ ಹಿಂಬಾಲಕರ ಮನೋಭಾವ ತಿಳಿಯದೆ ವ್ಯವಹರಿಸಿ ಪರೋಕ್ಷವಾಗಿ ಸರಕಾರದೊಡನೆ ಕೈಗೂಡಿಸಿದೆ. ಇಷ್ಟು ಸಾಧನೆಗಾಗಿ ರೈತ ಸಂಘಕ್ಕೆ ಜಿಲ್ಲೆಯ ಕಾಂಗ್ರೆಸ್ಸಿಗರು ಋಣಿಗಳು.

ಎಸ್. ಎಸ್. ರಾಮಪ್ರಸಾದ್,
ಕನ್ನಡ ಪ್ರಭಾ, 7-12-82

ಕಾಂ| ಸರೋಜ್ ಮುಖರ್ಜಿ ಆಯ್ಕೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಪಕ್ಷದ ಹಿರಿಯ ಮುಖಂಡರಾದ ಕಾಂ| ಸರೋಜ್ ಮುಖರ್ಜಿ ಅವರು ಆಯ್ಕೆಯಾಗಿದ್ದಾರೆ. ಕಾಂ| ಪ್ರಮೋದ್ ದಾಸ್ ಗುಪ್ತಾರವರ ನಿಧನದಿಂದಾಗಿ ಈ ಸ್ಥಾನ ತೆರವಾಗಿತ್ತು.

ಕರ್ನಾಟಕ ವಿಧಾನಸಭಾ ಚುನಾವಣೆ

೧೯ ಲಕ್ಷ ಹೊಸ ಮತದಾರರು

ಜನವರಿ 5 ರಂದು ನಡೆಯಲಿರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 19,37,968 ಮತದಾರರು ಮತದಾನ ಮಾಡಲು ಅರ್ಹರಾಗಿದ್ದಾರೆ.

ಕಳೆದ ಚುನಾವಣೆಗಿಂತ ಮದಾರರ ಸಂಖ್ಯೆ ಶೇ. 10.82ರಷ್ಟು ಹೆಚ್ಚಾಗಿದೆ. ಚುನಾವಣೆಗೆ ನಾಮಪತ್ರ ಸಲ್ಲಿಸಲು ಕಡೆಯ ದಿನ ಡಿಸೆಂಬರ್ 11. ನಾಮಪತ್ರಗಳನ್ನು ವಾಪಸ್ ಪಡೆಯಲು ಕಡೆಯ ದಿನ ಡಿಸೆಂಬರ್ ಹದಿನೈದು.

ಈ ಬಾರಿಯ ಚುನಾವಣೆಯಲ್ಲಿ 97,38,964 ಮಹಿಳಾ ಮತದಾರರ ಪೈಕಿ 9,45,968 ಮಹಿಳಾ ಮತದಾರರು ಪ್ರಥಮ ಬಾರಿ ಮತದಾನಕ್ಕೆ ಅರ್ಹರಾಗಿದ್ದಾರೆ.

1,049 ನೂತನ ಮತಗಟ್ಟೆಗಳೂ ಸೇರಿದಂತೆ ಒಟ್ಟು 224 ಕ್ಷೇತ್ರಗಳಿಗೆ ಸಂಬಂಧಿಸಿದಂತೆ 24,212 ಮತಗಟ್ಟೆಗಳಿರುತ್ತವೆ. ಒಟ್ಟು 224 ಕ್ಷೇತ್ರಗಳಲ್ಲಿ 189 ಸಾಮಾನ್ಯ ಕ್ಷೇತ್ರಗಳು. 33 ಮೀಸಲಾತಿ ಕ್ಷೇತ್ರಗಳು.

ಪ್ರಮೋದ್ ದಾಗೆ ವಿದಾಯ

(5ನೇ ಪುಟದಿಂದ)

ಘೋಷಣೆ ಮುಗಿಲು ಮುಟ್ಟುತ್ತಿದ್ದಂತೆ ಗುಂಡಿಯೊತ್ತಲಾಯಿತು.

"ಕಂಬನಿತುಂಬಿದ ಲಕ್ಷಾಂತರ ಜನರನ್ನೊಳಗೊಂಡ ವಿದಾಯ ಯಾತ್ರೆ" ಎಂದು ಕಲ್ಕತ್ತಾದ ರಾಷ್ಟ್ರೀಯ ದೈನಿಕಗಳು ಈ ಅಂತಿಮ ಯಾತ್ರೆಯನ್ನು ಬಣ್ಣಿಸಿವೆ.

"ಎಲ್ಲಾ ಜನವಿಭಾಗಗಳನ್ನೊಳಗೊಂಡ, ಎಣಿಸಲಸಾಧ್ಯದಾದ ಜನಪ್ರವಾಹ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡು, ನಲ್ಮೆಯ ನಾಯಕನಿಗೆ ಶ್ರದ್ಧಾಂಜಲಿ ಸಲ್ಲಿಸಿತು" ಎಂದು ಸ್ಟೇಟ್ಸ್‌ಮನ್ ವರದಿ ಮಾಡಿದೆ.

ಸರ್ವಾಧಿಕಾರೀ ಕಾಂಗ್ರೆಸ್ (ಐ) ಅನ್ನು ಸೋಲಿಸಿ ವಿರೋಧ ಪಕ್ಷಗಳ ಅಭ್ಯರ್ಥಿಗಳನ್ನು ಬೆಂಬಲಿಸಲು ಸಾಮೂಹಿಕ ಸಂಘಟನೆಗಳ ಕರೆ

ಜನವರಿ 5 ರಂದು ನಡೆಯಲಿರುವ ವಿಧಾನ ಸಭಾ ಚುನಾವಣೆಯಲ್ಲಿ ಸರ್ವಾಧಿಕಾರೀ ಕಾಂಗ್ರೆ ಪಕ್ಷದ ಅಭ್ಯರ್ಥಿಗಳನ್ನು ಹಾಗೂ ವಿರೋಧ ಪಕ್ಷಗಳೊಂದಿಗೆ ಐಕ್ಯತೆಗೆ ನಿರಾಕರಿಸಿ ಕಾಂಗ್ರೆ ಜೊತೆ ಪರೋಕ್ಷವಾಗಿ ಸಹಕರಿಸುತ್ತಿರುವ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಗಳನ್ನು ಸೋಲಿಸಿ ವಿರೋಧ ಪಕ್ಷಗಳ ಅಭ್ಯರ್ಥಿಗಳನ್ನು ಬೆಂಬಲಿಸಲು ಕರ್ನಾಟಕ ಪ್ರಾಂತ ರೈತ ಸಂಘ, ಎಸ್.ಎಫ್.ಐ., ಡಿ.ವೈ.ಎಫ್.ಐ. ಮುಂತಾದ ಸಾಮೂಹಿಕ ಸಂಘಟನೆಗಳು ಕರೆ ನೀಡಿವೆ.

ಗುತ್ತೇದಾರಿ ಬಂಡವಾಳಶಾಹೀ ಮತ್ತು ಸಾಮ್ರಾಜ್ಯಶಾಹೀ ಪರ ಆರ್ಥಿಕ ನೀತಿಯನ್ನು ಅನುಸರಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಕಾಂಗ್ರೆಸ್ (ಐ) ಸರ್ಕಾರವು ರೈತರ, ಕಾರ್ಮಿಕರ, ವಿದ್ಯಾರ್ಥಿಗಳ, ಯುವಜನರ ಹಿತಾಸಕ್ತಿಗಳನ್ನು ದಮನ ಮಾಡುತ್ತಿದೆ.

ತಮ್ಮ ಸಮಸ್ಯೆಗಳ ಕುರಿತಾಗಿ ಹೋರಾಟ ನಡೆಸುವ ರೈತರ, ಕಾರ್ಮಿಕರ, ವಿದ್ಯಾರ್ಥಿ ಯುವಜನರನ್ನು ತನ್ನ ಆಡಳಿತ ಯಂತ್ರದ ಮೂಲಕ ಕ್ರೂರವಾಗಿ ಮರ್ಧಿಸತೊಡಗಿದೆ. ಆಡಳಿತದ ಎಲ್ಲಾ ಹಂತಗಳಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ (ಐ) ಅನ್ನು ಮತ್ತು ಕೋಮುವಾದೀ ಪಕ್ಷವಾಗಿರುವ ಬಿ.ಜೆ.ಪಿ.ಯನ್ನು ಸೋಲಿಸುವುದು ಅತ್ಯಂತ ತುರ್ತು ಕರ್ತವ್ಯವೆಂದು ಸಾಮೂಹಿಕ ಸಂಘಟನೆಗಳು ಅಭಿಪ್ರಾಯಪಟ್ಟಿವೆ.

○

ಚುನಾವಣಾ ನಿಧಿಗೆ ಉದಾರ ಧನ ಸಹಾಯ ಮಾಡಿರಿ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕರೆ

ಕರ್ನಾಟಕ ವಿಧಾನಸಭೆಯ ಚುನಾವಣೆ ಜನವರಿ 5 ರಂದು ನಡೆಯತಕ್ಕದ್ದೆಂದು ಚುನಾವಣಾ ಕಮಿಶನ್ ಪ್ರಕಟಿಸಿದೆ. ಎಲ್ಲ ರಾಜಕೀಯ ಪಕ್ಷಗಳೂ ಚುನಾವಣೆಯ ತಯಾರಿ ನಡೆಸಿವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದೆ. ಆಳುವ ಪಕ್ಷ ಹಾಗೆಯೇ ಇತರ ಕೆಲವು ವಿರೋಧ ಪಕ್ಷಗಳಿಗೆ ಹಣದ ತೊಂದರೆಯಿಲ್ಲ. ನೀರಿನಂತೆ ಹಣ ಖರ್ಚು ಮಾಡುತ್ತಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ರೈತ-ಕಾರ್ಮಿಕರ, ದುಡಿಯುವ ಜನತೆಯ ಪಾರ್ಟಿ. ಬಡವರ, ರೈತ–ಕಾರ್ಮಿಕರ ಹಾಗೆಯೇ ಮಧ್ಯಮ ವರ್ಗದವರ ಅಲ್ಪ ಸಹಾಯದಿಂದಲೇ ಚುನಾವಣೆಯಲ್ಲಿ ಸ್ಪರ್ಧಿಸಲು ಈ ಪಾರ್ಟಿಗೆ ಸಾಧ್ಯ.

ಜನರ ಮೇಲೆ ದೈನಂದಿನ ನಡೆಯುತ್ತಿರುವ ಅತ್ಯಾಚಾರ, ದಬ್ಬಾಳಿಕೆ, ಸುಲಿಗೆ-ಭ್ರಷ್ಟಾಚಾರಗಳ ವಿರುದ್ಧ ಹೋರಾಡಬೇಕಾದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಉಮೇದುವಾರರು ಚುನಾವಣೆಯಲ್ಲಿ ಗೆಲ್ಲಬೇಕು. ಅದಕ್ಕೆ ಚುನಾವಣೆಯ ಪ್ರಚಾರ ಯಶಸ್ವಿಯಾಗಿ ನಡೆಯಬೇಕು. ಆ ರೀತಿಯ ಪ್ರಚಾರಕ್ಕೆ ಹಣಕಾಸು ಅತ್ಯಂತ ಅವಶ್ಯಕ.

ಆದ್ದರಿಂದ ರೈತರು, ಕಾರ್ಮಿಕರು, ನೌಕರದಾರರೂ, ಮಧ್ಯಮ ವರ್ಗದವರೂ, ಎಲ್ಲ ಪ್ರಜಾಪ್ರಭುತ್ವವಾದಿಗಳೂ ಉದಾರ ಹಸ್ತದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಚುನಾವಣಾ ನಿಧಿಗೆ ನೆರವು ನೀಡಬೇಕೆಂದು ಕೇಳಿಕೊಳ್ಳುತ್ತೇವೆ.

ಪಾರ್ಟಿ ಹಿತೈಷಿಗಳು ತಮ್ಮ ಸಹಾಯವನ್ನು ಸ್ಥಳೀಯ ಪಾರ್ಟಿ ಕಮಿಟಿಗೆ ಕೊಡಬಹುದು ಅಥವಾ ನೇರವಾಗಿ ರಾಜ್ಯ ಸಮಿತಿ ಕಚೇರಿಗೆ ಕಳುಹಿಸಿಕೊಡಬಹುದು.

ಎಲ್-56, ಕೆ. ವಿ. ಟೆಂಪಲ್ ಸ್ಟ್ರೀಟ್,
ಸುಲ್ತಾನ್‌ಪೇಟೆ,
ಬೆಂಗಳೂರು-560053

ಪಿ. ರಾಮಚಂದ್ರರಾವ್
ಕಾರ್ಯದರ್ಶಿ

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street, Sultanpet, B-560 053. Phone-24154, Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO